# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



Spend LESS and get MORE publicity

BENEFITS OF ADVERTISING
in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options



CALL US : 9448633038

Email us Your Advertisement Content to : hampitimes@gmail.com



| | | | | | | | |
|---|---|---|---|---|---|---|---|
| ಸಂಪುಟ:01 | ಸಂಚಿಕೆ:206 | ನೋಂದಣಿ ನಂ.:KARKAN27911 | ವಿಜಯನಗರ | 10.01.2024 | ಬುಧವಾರ | ಪುಟ:04 | ಬೆಲೆ:2 |
| Volume:01 | Issue:206 | Reg.No:KARKAN27911 | VIJAYANAGARA | 10.01.2024 | Wednesday | Page:04 | Rs:2 |





/freshiesicecreams

Pure delight in every bite. Savour the freshness of real fruit!

freshies
fruit icecreams

Visit us today!

#9, ISR Road, Beside KLS Hospital, Near Amedkar Circle, Hospete

Mob: 7036030603

Locate us:


# ವಿಶ್ವವಿದ್ಯಾಲಯಗಳಲ್ಲೇ ವಿಶೇಷ ಕನ್ನಡ ವಿವಿ

## ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಕೆ.ರವಿ ಹೇಳಿಕೆ | ಕನ್ನಡ ವಿವಿ ನುಡಿಹಬ್ಬ–32ರ ಸಂಭ್ರಮ | 51 ಪುಸ್ತಕಗಳ ಲೋಕಾರ್ಪಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯದ ಬಗ್ಗೆ ಅನೇಕರಿಗೆ ಸಷ್ಟ ಕಲ್ಪನೆ ಇಲ್ಲ. ಕನ್ನಡ ವಿವಿಯನ್ನು ಸಂಶೋಧನೆಯಲ್ಲಿ ಬಲಿಷ್ಠಗೊಳಿಸುವ ಮೂಲಕ ಕನ್ನಡ, ಕರ್ನಾಟಕವನ್ನು ಮತ್ತಷ್ಟು ಶ್ರೀಮಂತಗೊಳಿಸಬೇಕಿದೆ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಕೆ.ರವಿ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬ–32ರ ಪ್ರಯುಕ್ತ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದಿಂದ ಮಂಗಳವಾರ ಮಂಟಪ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 51 ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಸಿಎಂ ಸಿದ್ದರಾಮಯ್ಯನವರು ಕನ್ನಡದ ಬಗ್ಗೆ ಅಪಾರ ಪ್ರೀತಿಯನ್ನಿಟ್ಟುಕೊಂಡಿದ್ದಾರೆ. ವಿಶ್ವದ ಮುಕುಟಮಣಿಯಂತಿರುವ ಕನ್ನಡ ವಿವಿಗೆ ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು. ಕನ್ನಡ ವಿವಿ ಸ್ವಾಭಿಮಾನದ ಸಂಕೇತವಾಗಿದೆ. ಅನಕ್ಷರಸ್ಥರಲ್ಲಿರುವ ಅಪಾರ ಜ್ಞಾನವನ್ನು ಸಂಶೋಧನೆ ಮೂಲಕ ಅಕ್ಷರಕ್ಕಿಳಿಸುತ್ತಿದೆ. ವಿವಿ ಆರಂಭದಿಂದಲೂ ವಿನೂತನ ಪ್ರಯೋಗಕ್ಕೆ ಸದಾ ಮುಂಚೂಣಿಯಲ್ಲಿದೆ. ಭಾಷೆ, ಹಸ್ತಪ್ರತಿ, ಲಿಪಿ ಸೇರಿದಂತೆ ನಾನಾ ಸಾಮಾಜಿಕ ಕ್ಷೇತ್ರದಲ್ಲಿ ವೈಜ್ಞಾನಿಕವಾಗಿ ಸಂಶೋಧನೆ ಮಾಡುತ್ತಿದೆ. ಡಿಗ್ರಿ ಕೊಡುವ ವಿವಿಯಾಗಿ ಉಳಿಯಲು ಸ್ಥಾಪನೆಗೊಂಡಿಲ್ಲ. ಕನ್ನಡವನ್ನು ಜಗತ್ತಿನಾದ್ಯಂತ ವಿಸ್ತರಣೆ ಹುಟ್ಟಿಕೊಂಡಿರುವ ವಿವಿಯಾಗಿದೆ. ಅನೇಕ ಉತ್ಕೃಷ್ಟ ಗ್ರಂಥಗಳನ್ನು ಜನರಿಗೆ ತಲುಪಿಸುವಂತಹ ಕೀರ್ತಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲುತ್ತದೆ .



ಕನ್ನಡ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು, ಸಂಶೋಧನೆಗಳು ನೋಡಿದರೆ ಇದು ಕೇವಲ ಪದವಿ, ಸ್ನಾತಕೋತ್ತರ ಪದವಿಯನ್ನು ನೀಡುವ ಅಥವಾ ಪಾಠ ಬೋಧಿಸುವ ವಿವಿಯಲ್ಲ. ದೇಶದಲ್ಲೇ 1600 ಪುಸ್ತಕಗಳನ್ನು ಪ್ರಕಟಣೆ ಮಾಡಿರುವ ಪ್ರಸಾರಾಂಗ ಎಲ್ಲಾದರೂ ಇದೆ ಎಂದರೆ ಅದು ಕನ್ನಡ ವಿವಿಯಲ್ಲಿದೆ. ಸಿಎಂ ಸಿದ್ದರಾಮಯ್ಯನವರು ಕನ್ನಡ ವಿವಿಗೆ ವಿಶೇಷ ಅನುದಾನ ನೀಡುವ ಮೂಲಕ ಕನ್ನಡ ಬಲಿಷ್ಠಗೊಳಿಸುವ ಕಾಯಕಕ್ಕೆ ಪ್ರೋತ್ಸಹಿಸಬೇಕೆಂದು ನಾನು ಸಹ ಒತ್ತಾಯಿಸುತ್ತಿದ್ದೇನೆ ಎಂದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ ಪರಮಶಿವಮೂರ್ತಿ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿ, ಪುಸ್ತಕದ ಬಿಡುಗಡೆ ಮಾಡುವುದು ಒಂದು ಪುಣ್ಯದ ಕೆಲಸವಾಗಿದೆ. ನಮ್ಮ ವಿವಿಯ ಅಧ್ಯಾಪಕರನ್ನು ಒಳಗೊಂಡಂತೆ ನಾಡಿನ ವಿವಿದ ವಿದ್ವಾಂಸರು ರಚಿಸಿದ 51 ಅಮೂಲ್ಯ ಪುಸ್ತಕಗಳು ಈ ದಿನ ಬಿಡುಗಡೆ ಮಾಡಲಾಗಿದೆ. ಪಸ್ತಕಗಳನ್ನು ಓದುವುದು ಆಗದಿದ್ದರೆ ಅವುಗಳ ತಲೆ ಬರಹಗಳನ್ನು ಓದಿದರೆ ಮನಸ್ಸಿಗೆ ಎಷ್ಟೋ ನೆಮ್ಮದಿ ಸಿಗುತ್ತದೆ. ನಮ್ಮಲ್ಲಿರುವ ಅಹಂ ಅನ್ನು ತ್ಯಜಿಸುವ ಕೆಲಸವನ್ನು ಪುಸ್ತಕಗಳು ಮಾಡುತ್ತವೆ. ಬರೆದ ವ್ಯಕ್ತಿ ಇಲ್ಲದಿದ್ದರೂ ಸಹ ಬರವಣಿಗೆ ಅವರ ವಿಚಾರಗಳು ದೀರ್ಘಕಾಲ ಕೆಲಸವನ್ನು ಮಾಡುತ್ತಾ ಹೋಗುತ್ತವೆ. ವಿಶ್ವವಿದ್ಯಾಲಯಗಳನ್ನು ಪೋಷಿಸುವ ಜವಾಬ್ದಾರಿ ಕೇವಲ ಸರಕಾರಗಳದ್ದು ಮಾತ್ರವಲ್ಲದೇ ಸಾರ್ವಜನಿಕರದ್ದೂ ಆಗಿದೆ ಎಂದರು.

ಧಾರವಾಡದ ಹಿರಿಯ ಇತಿಹಾಸತಜ್ಞರು ಹಾಗೂ ಸಂಸ್ಕೃತಿ ಚಿಂತಕ ಪ್ರೊ.ಲಕ್ಷ್ಮಣ್ ತೆಲಗಾವಿ ಮಾತನಾಡಿದರು. ಗಂಗಾವತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಜಾಜಿ ದೇವೇಂದ್ರಪ್ಪ ಹಾಗೂ ಕಂಪ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಜೆ.ಕೃಷ್ಣ ಈರ್ವರು ಬಿಡುಗಡೆಯಾದ ಪುಸ್ತಕಗಳ ಬಗ್ಗೆ ಮಾತನಾಡಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಸಾರಾಂಗ ವಿಭಾಗದ ನಿರ್ದೇಶಕರಾದ ಡಾ. ಶೈಲಜ ಇಂ. ಹಿರೇಮಠ ಅವರು ಸ್ವಾಗತಿಸಿದರು. ಪ್ರಸಾರಾಂಗ ವಿಭಾಗದ ಸಹಾಯಕ ಕುಲಸಚಿವರಾದ ಎಂ.ಎಂ.ಶಿವಪ್ರಕಾಶ್ ನಿರೂಪಿಸಿದರು. ಕನ್ನಡ ವಿವಿಯ ನುಡಿ ಹಬ್ಬ 32ರ ಮಾಹಿತಿ ಕೇಂದ್ರದ ಸಂಚಾಲಕಿ ಡಾ.ಮೀನಾಕ್ಷಿ ಸೇರಿದಂತೆ ಇತರರು ಇದ್ದರು. ಸಂಗೀತ ವಿಭಾಗದ ವಿದ್ಯಾರ್ಥಿಗಳು ಪ್ರಾರ್ಥನಾ ಗೀತೆ ಹಾಗೂ ನಾಡಗೀತೆಯನ್ನು ಪ್ರಸ್ತುತ ಪಡಿಸಿದವರು. ಸಮಾರಂಭದಲ್ಲಿ ಹಲವು ಗಣ್ಯರು, ವಿದ್ಯಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



> ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ 100 ವರ್ಷಗಳಲ್ಲಿ ಮಾಡಿರುವ ಕಾರ್ಯವನ್ನು ಕನ್ನಡ ವಿಶ್ವವಿದ್ಯಾಲಯ 32 ವರ್ಷಗಳಲ್ಲಿ ಮಾಡಿದೆ. ಪುಸ್ತಕಗಳು ನಮ್ಮ ಅಹಮಿಕೆಯನ್ನು ಕಳೆಯುತ್ತವೆ. ಇತ್ತೀಚೆಗೆ ಉನ್ನತ ಶಿಕ್ಷಣದ ಬಗ್ಗೆ ಗಂಭೀರವಾದ ಚಿಂತನೆಗಳು ನಡೆಯುತ್ತಿದ್ದರು ಕೂಡ ಮತ್ತೊಂದ ಕಡೆ ಅದನ್ನು ನಿರ್ಲಕ್ಷಿಸುವ ಸಂಗತಿಗಳು ನಡೆಯುತ್ತಿದ್ದು, ಇದಕ್ಕೆ ಸರ್ಕಾರ ಮತ್ತು ಸಮಾಜ ಎರಡು ಕಾರಣವಾಗಿವೆ. ವಿಶ್ವವಿದ್ಯಾಲಯವನ್ನು ಪೋಷಿಸುವ ಜವಾಬ್ದಾರಿ ಸಮಾಜದ ಮೇಲಿದೆ.
>
> – ಡಾ. ಡಿ.ವಿ ಪರಮಶಿವಮೂರ್ತಿ
> ಕುಲಪತಿ, ಕನ್ನಡ ವಿವಿ

> ಗ್ರಂಥಾಲಯ, ಪ್ರಸಾರಾಂಗ ವಿವಿಗಳಿಗೆ ಎರಡು ಕಣ್ಣಿದ್ದಂತೆ, ಅಧ್ಯಾಪಕರು, ವಿದ್ಯಾರ್ಥಿಗಳು ದೃಷ್ಟಿ ಇದ್ದಂತೆ. ಕನ್ನಡ ವಿವಿ ಪಾಠ ಮಾಡುವ ವಿವಿ ಅಲ್ಲ. ಅಕ್ಷರ ಕಟ್ಟಡದಲ್ಲಿ ಮೊದಲ ಕುಲಪತಿ ಕಂಬಾರರ ಪ್ರತಿಮೆ ಸ್ಥಾಪಿಸಬೇಕು. ಕನ್ನಡ ವಿವಿ ಗ್ರಂಥಾಲಯವನ್ನು ರಾಷ್ಟ್ರೀಯ ಗ್ರಂಥಾಲಯವನ್ನಾಗಿಸಬೇಕೆಂಬ ಕನಸು ಕಂಡಿದ್ದರು. ಗ್ರಂಥಾಲಯಗಳ ಮಹತ್ವ ಎಂದಿಗೂ ತಗ್ಗಲ್ಲ. ಬೇಡಿಕೆ ಇರುವ ಪ್ರಕಟಣೆಗಳಿಗೆ ಕನ್ನಡ ವಿವಿ ಆದ್ಯತೆ ನೀಡಿ ರಿಯಾಯಿತಿ ಬೆಲೆಯಲ್ಲಿ ಓದುಗರ ಕೈಗೆ ನೀಡುತ್ತಿದೆ.
>
> – ಪ್ರೊ. ಲಕ್ಷ್ಮಣ್ ತೆಲಗಾವಿ
> ಸಂಸ್ಕೃತಿ ಚಿಂತಕರು

**ಮೈಕ್ರೋ ನ್ಯೂಸ್**

## ಇಂದು ಕನ್ನಡ ವಿವಿ ಘಟಿಕೋತ್ಸವಕ್ಕೆ ರಾಜ್ಯಪಾಲರ ಆಗಮನ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕದ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರು ಜ.10 ಮತ್ತು 11ರಂದು ವಿಜಯನಗರ ಜಿಲ್ಲೆಯಲ್ಲಿ ಪ್ರವಾಸಕೈಗೊಂಡಿದ್ದಾರೆ.



ರಾಜ್ಯಪಾಲರು ಜ.10 ರಂದು ಮಧ್ಯಾಹ್ನ 3.30ಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅತಿಥಿಗೃಹಕ್ಕೆ ಆಗಮಿಸುವರು. ಅಲ್ಲಿಂದ 4.30ಕ್ಕೆ ಕನ್ನಡ ವಿಶ್ವವಿದ್ಯಾಲಯದ ಆಡಳಿತ ವಿಭಾಗಕ್ಕೆ ಭೇಟಿ ನೀಡುವರು. ಸಂಜೆ 5 ಗಂಟೆಗೆ ವಿದ್ಯಾರಣ್ಯದ ನವರಂಗ ಬಯಲು ರಂಗಮಂದಿರದಲ್ಲಿ ನಡೆಯಲಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬ ಘಟಿಕೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಅಂದು ಅತಿಥಿಗೃಹದಲ್ಲಿ ವಾಸ್ತವ್ಯ ಹೂಡುವರು.

ಜ.11ರಂದು ಬೆಳಿಗ್ಗೆ 9.15ಕ್ಕೆ ಕೋದಂಡರಾಮ ದೇವಸ್ಥಾನ, ಹನಾಮಾನ ದೇವಸ್ಥಾನ, ಸುಗ್ರೀವ ಗುಹೆ, ಸೀತಾ ಸೆರಗು ದರ್ಶನ ಪಡೆಯುವರು. ನಂತರ ದಾವಣಗೆರೆ ಜಿಲ್ಲೆಗೆ ಪ್ರಯಾಣ ಬೆಳಸುವರು ಎಂದು ಪ್ರಕಟಣೆ ತಿಳಿಸಿದೆ.

## ಬೋರ್‌ವೆಲ್, ಮಿನಿ ಟ್ಯಾಂಕ್‌ಗಳ ನೀರು ಕುಡಿಯಬೇಡಿ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬೋರ್‌ವೆಲ್‌ಗಳ ಮತ್ತು ಮಿನಿ(ಸಿಸ್ಟರ್ನ್)ಟ್ಯಾಂಕ್‌ಗಳ ನೀರು ಕುಡಿಯಲು ಉಪಯೋಗಿಸಬಾರದು. ಸಾರ್ವಜನಿಕರು ಬೋರ್‌ವೆಲ್‌ಗಳ ಹಾಗೂ ಮಿನಿ(ಸಿಸ್ಟರ್ನ್) ಟ್ಯಾಂಕ್‌ಗಳ ನೀರನ್ನು ಇನ್ನಿತರೆ ಕೆಲಸಗಳ ಬಳಕೆಗೆ ಮಾತ್ರ ಉಪಯೋಗಿಸಬೇಕು ಎಂದು ಹೊಸಪೇಟೆ ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

## ಹಳೆಯ ಪಿಂಚಣಿ ಯೋಜನೆ ಮರುಜಾರಿಗೆ ಆಗ್ರಹ

### ಸೌಥ್ ವೆಸ್ಟರ್ನ್ ರೈಲ್ವೇ ಮಜ್ದೂರ್ ಯೂನಿಯನ್ ಹೊಸಪೇಟೆ ಶಾಖೆಯ ಸದಸ್ಯರಿಂದ ಉಪವಾಸ ಮುಷ್ಕರ

**ಹಂಪಿ ಟೈಮ್ಸ್ ಹೊಸಪೇಟೆ:**

ಹೊಸ ಪಿಂಚಣಿ ಯೋಜನೆ (ರಾಷ್ಟ್ರೀಯ ಪಿಂಚಣಿ ಯೋಜನೆ–ಎನ್‌ಪಿಎಸ್) ರದ್ದು ಪಡಿಸಿ ಮತ್ತು ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರುಸ್ಥಾಪನೆಗೆ ಒತ್ತಾಯಿಸಿ ಸೌಥ್ ವೆಸ್ಟರ್ನ್ ರೈಲ್ವೇ ಮಜ್ದೂರ್ ಯೂನಿಯನ್, ಹೊಸಪೇಟೆ ಶಾಖೆ ನಗರದ ರೈಲ್ವೆ ನಿಲ್ದಾಣದ ಬಳಿ ಜ.8ರಿಂದ ಉಪವಾಸ ಮುಷ್ಕರ ಆರಂಭಿಸಿದೆ.

ಮಜ್ದೂರ್ ಯೂನಿಯನ್ ಕಾರ್ಯದರ್ಶಿ ಎಸ್.ಮಸ್ತಾನ್‌ವಲಿ ಮಾತನಾಡಿ, ನವದೆಹಲಿಯಲ್ಲಿ ಅಖಿಲ ಭಾರತ ರೈಲ್ವೇಮೆನ್ ಫೆಡರೇಶನ್ (ಎ.ಐ.ಆರ್.ಎಫ್) ಮತ್ತು ಸೌತ್ ವೆಸ್ಟರ್ನ್ ರೈಲ್ವೇ ಮಜ್ದೂರ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಕಾಂ.ಡಾ.ಎ.ಎಂ.ಡಿ ಕ್ರೂಜ್ ಅವರು ಕರೆ ನೀಡಿದ ಹಿನ್ನೆಲೆಯಲ್ಲಿ ಜ.11ವರೆಗೆ ಉಪವಾಸ ಮುಷ್ಕರ ಆರಂಭಿಸಿದ್ದೇವೆ. 2024ರ ಜ.1ರ ನಂತರ ನೇಮಕಗೊಮಡ



ನೌಕರರಿಗೆ ಜಾರಿಗೊಳಿಸಲಾದ ಎನ್‌ಪಿಎಸ್, ನಿವೃತ್ತಿಯ ನಂತರ ಒಪಿಎಸ್ ನಂತೆ ಸ್ಥಿರ ಅಥವಾ ಖಾತರಿ ಪಿಂಚಣಿ ನೀಡದು. ಇದರಿಂದ ಉದ್ಯೋಗಿಗಳು ನಿವೃತ್ತಿ ನಂತರ ಉದ್ಯೋಗಿಯನ್ನೆ ಅವಲಂಬಿಸಿದ ಕುಟುಂಬದ ಸದಸ್ಯರು ತೀವ್ರ ತೊಂದರೆ ಸಿಲುಕುತ್ತಾರೆ. ಹಳೆ ಪಿಂಚಣಿಯನ್ನೆ ಮರುಜಾರಿಗೊಳಿಸುವ ಮೂಲಕ ಉದ್ಯೋಗಿಗಳ ಕುಟುಂಬಕ್ಕೆ ಭದ್ರತೆ ಒದಗಿಸಬೇಕು ಎಂದು ಒತ್ತಾಯಿಸಿದರು.

ಶಾಖೆಯ ಅಧ್ಯಕ್ಷ ಕಾಂ.ವೈ.ವಿ.ಮರಳಿ, ಖಜಾಂಚಿ ಕಾಂ.ಡಿ.ಎಂ. ನೂರ್ ಮೊಹಮ್ಮದ್, ಬಿ.ವಿ.ವಿ.ಎಸ್.ಎನ್. ಪ್ರಸಾದ್, ಓಬಳೇಶ್, ಶ್ರೀನಿವಾಸಲು, ರಾಜಾವಲಿ, ಪಂಪಣ್ಣ ಗೌಡ, ಸೇರಿದಂತೆ ಅನೇಕ ನೌಕರರು ಇದ್ದರು.



2024 ಜನವರಿ 22 ರಂದು ನಡೆಯುವ ಐತಿಹಾಸಿಕ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಪ್ರತಿಷ್ಠಾಪನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಕರ್ನಾಟಕದ ವಿಶ್ವ ಹಿಂದೂ ಪರಿಷತ್ತಿನ ಪ್ರಮುಖರು ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳವರಿಗೆ ಆಹ್ವಾನ ನೀಡಿದರು.

## ಹೋಟೆಲ್‌ಗಳಲ್ಲಿ ಸ್ವಚ್ಛತೆ ಬಿಸಿನೀರು ಕಡ್ಡಾಯ

### ಹೊಸಪೇಟೆಯಲ್ಲಿ ವಾಂತಿಭೇದಿ ಪ್ರಕರಣ ಹೆಚ್ಚಳ, ಡಿಸಿ ದಿವಾಕರ ಕಟ್ಟುನಿಟ್ಟಿನ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಕಳೆದೆರಡು ದಿನಗಳಿಂದ ಹೊಸಪೇಟೆಯ ನಗರ ಪ್ರದೇಶಗಳಲ್ಲಿ ಅಲ್ಲಲ್ಲಿ ತೀವ್ರ ವಾಂತಿ–ಭೇದಿ ಪ್ರಕರಣಗಳು ಕಂಡುಬಂದಿದ್ದು, ಮುಂಜಾಗ್ರತಾ ಕ್ರಮವಾಗಿ ನಗರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹೋಟೇಲ್‌ಗಳಲ್ಲಿ ಸ್ವಚ್ಛತಾ ಕ್ರಮಗಳನ್ನು ಪಾಲನೆ ಮಾಡಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಎಲ್ಲಾ ಹೋಟೇಲ್ ಮಾಲೀಕರಿಗೆ ಹಾಗೂ ವ್ಯವಸ್ಥಾಪಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಎಲ್ಲಾ ಹೋಟೇಲ್‌ಗಳಲ್ಲಿ ಗ್ರಾಹಕರಿಗೆ ಕುಡಿಯಲು ಕಡ್ಡಾಯವಾಗಿ ಕಾಯಿಸಿ ಆರಿಸಿದ ನೀರನ್ನೇ ನೀಡಬೇಕು. ಹೋಟೇಲ್‌ಗಳನ್ನು >> 3

## ಅಪಘಾತ: ಇಬ್ಬರು ಸಾವು, ಮೂವರಿಗೆ ಗಾಯ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಹೊಸಹಳ್ಳಿ ಬಳಿ ಮಂಗಳವಾರ ಬೆಳಗಿನಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಗದಗ ಜಿ.ಪಂ. ಮಾಜಿ ಅಧ್ಯಕ್ಷ ಸಿದ್ದು ಪಾಟೀಲ ಅವರ ಸಹೋದರ ಚನ್ನವೀರಗೌಡ ಪಾಟೀಲ ಸೇರಿದಂತೆ ಇಬ್ಬರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಗದಗ ನಿವಾಸಿಗಳಾದ ಚನ್ನವೀರಗೌಡ ಹೊಳೆಯಪ್ಪಗೌಡ ಪಾಟೀಲ(29), ಸ್ನೇಹಿತ ಯುವರಾಜ ಕಾಶಪ್ಪ ಹೂಗಾರ್(22) ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.

ವೀರಣ್ಣ ಸಂಗಳದ್, ಮಂಜುನಾಥ ತಳವಾರ ಹಾಗೂ ಕಾರು ಚಾಲಕ ಚಿದಂಬರ್ ಕುಲ್ಕರ್ಣಿ ಗಂಭೀರವಾಗಿ ಗಾಯಗೊಂಡಿದ್ದು, ದಾವಣಗೆರೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗದಗದಿಂದ ಹೊಸಪೇಟೆ ಮಾರ್ಗವಾಗಿ ಚಿತ್ರದುರ್ಗದತ್ತ ತೆರಳುತ್ತಿರುವಾಗ ಹೊಸಹಳ್ಳಿ ಬಳಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದರಿಂದ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗದಗ ಜಿ.ಪಂ. ಮಾಜಿ ಅಧ್ಯಕ್ಷ ಸಿದ್ದು ಪಾಟೀಲ ಅವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಆಪ್ತ.

**ಒಳ ಪುಟಗಳಲ್ಲಿ**


**ಹುಬ್ಬು ಅಭಿಮಾನದ ಹೊಳೆಯಲ್ಲಿ ಕೊಚ್ಚಿ ಹೋಗದಿರಲಿ ಮಕ್ಕಳು**
– ವೀಣಾ ಹೇಮಂತಗೌಡ ಪಾಟೀಲ್
ಪುಟ 2 ರಲ್ಲಿ ಓದಿ

**ಕ್ರಿಯಾ ಯೋಜನೆ ಸಮರೋಪಾದಿಯಲ್ಲಿ ಅನುಷ್ಠಾನಕ್ಕೆ ಸಿಎಂ ಖಡಕ್ ಸೂಚನೆ**
ಪುಟ 3 ರಲ್ಲಿ ಓದಿ

**ಬಳ್ಳಾರಿ ಆಗ್ರೋ ಪ್ರೊಸೆಸ್ಸಿಂಗ್ ಕ್ಲಸ್ಟರ್ ನಿರ್ಮಾಣಕ್ಕೆ ಪ್ರಸ್ತಾವನೆ**
ಪುಟ 3 ರಲ್ಲಿ ಓದಿ

**ಬಳ್ಳಾರಿಗೆ ಚಾಂಪಿಯನ್‌ಶಿಪ್ ಕಪ್**
ಪುಟ 3 ರಲ್ಲಿ ಓದಿ

ಹಂಪಿ ಟೈಮ್ಸ್
HAMPI TIMES

## ವಚನ ಅರಿವು

### ಗಟ್ಟಿ ಕಾಳಾಗಬೇಕು

**ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ?**

**ಜಳ್ಳ ತೂರಿದಲ್ಲಿ ಬತ್ತವುಂಟೆ?**

**ಕಳ್ಳ ಹಾದರಿಗರ ಸಂಪಾದನೆ**

**ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತೆ**

**ಕಾಣಾ ರಾಮನಾಥ.**

**– ಜೇಡರ ದಾಸಿಮಯ್ಯ**

ಎಳ್ಳು ಹಾಕದೆ ಗಾಣವನ್ನು ಎಷ್ಟು ತಿರುಗಿಸಿದರೂ ಎಣ್ಣೆ ಬರುವುದಿಲ್ಲ. ಒರಳಿನ ತುಂಬ ಬರಿ ಜೊಳ್ಳುಗಳನ್ನು ತುಂಬಿ ಒನಕೆಯಲ್ಲಿ ಎಷ್ಟೇ ಕುಟ್ಟಿದರೂ ಒಂದು ಕಾಳು ಅಕ್ಕಿ ಬರುವುದಿಲ್ಲ. ಹಾಗೆಯೇ ಅಂತಸ್ಸತ್ವವಿಲ್ಲದ ಬದುಕಿನಿಂದ ಏನೂ ಪ್ರಯೋಜನವಿಲ್ಲ. ಒಳ–ಹೊರಗೂ ಬೇಧವಿಲ್ಲದೆ ಬದುಕಿದರೆ ಸತ್ವಯುತ ಬದುಕಾಗುತ್ತದೆ. ಕಳ್ಳತನ, ಹಾದರದಿಂದ ಅಥವಾ ಕಳ್ಳ ದಾರಿಯಿಂದ ಗಳಿಸಿ ಸುಖವಾಗಿದ್ದೇವೆ ಅಂದರೆ ಅದು ತೌಡನ್ನು ಕುಟ್ಟಿ ನೋವು ಮಾಡಿಕೊಂಡು, ಕೈ ತುಂಬ ತೌಡು ತುಂಬಿಕೊಂಡಂತೆ ವ್ಯರ್ಥ. ಇಂತಹವರಿಗೆ ಜ್ಞಾನ, ಭಕ್ತಿ ಜೀವನ, ಸುಖ ಸಿಗುವುದಿಲ್ಲ ಎನ್ನುವುದು ಈ ವಚನದ ತಿರುಳು.

**(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)**

## ಅಪೌಷ್ಟಿಕತೆಯಿಂದ ಮಕ್ಕಳು ಮರಣವಾಗುವುದನ್ನು ತಡೆಗಟ್ಟಿ: ಡಾ.ಪ್ರಕಾಶ



**ಹಂಪಿ ಟೈಮ್ಸ್ ಕೊಪ್ಪಳ**

ಸಮುದಾಯ ಆರೋಗ್ಯ ಅಧಿಕಾರಿಗಳಿಗೆ ಚೈನ್ ಮಕ್ಕಳ ಸುಧಾರಿತ ಪೌಷ್ಟಿಕತೆಗಾಗಿ ಆರೋಗ್ಯ ಪ್ರಕ್ರಿಯೆ ತರಬೇತಿ ಕಾರ್ಯಕ್ರಮವು ಜನವರಿ 9ರಂದು ನಡೆಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಂದ ರಾಷ್ಟ್ರೀಯ ಪೌಷ್ಠಿಕ ಆರೋಗ್ಯ ಕಾರ್ಯಕ್ರಮದಡಿ ಕುಷ್ಟಗಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಪ್ರಕಾಶ್ ವಿ ಅವರು ಮಾತನಾಡಿ, ಐದು ವರ್ಷದೊಳಗಿನ ಮಕ್ಕಳಲ್ಲಿ ಕಂಡು ಬರುವ ಅಪೌಷ್ಟಿಕತೆಯನ್ನು ಗುರುತಿಸಿ ಅವರಿಗೆ ಚಿಕಿತ್ಸೆ ನೀಡಿ ಮಕ್ಕಳ ಮರಣ ತಡೆಗಟ್ಟುವುದು ಪ್ರತಿಯೊಬ್ಬ ಆರೋಗ್ಯ ಕಾರ್ಯಕರ್ತರ ಜವಾಬ್ದಾರಿಯಾಗಿದೆ. ಭಾರತವು ಹಳ್ಳಿಗಳ ದೇಶವಾಗಿದೆ. ಹಳ್ಳಿಗಳು ಅಭಿವೃದ್ಧಿಯಾದರೆ ಮಾತ್ರ ದೇಶ ಅಭಿವೃದ್ಧಿಯಾದಂತೆ. ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಸಮುದಾಯ ಆರೋಗ್ಯ ಅಧಿಕಾರಿಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಅಪೌಷ್ಟಿಕ ಮಕ್ಕಳು ಕಂಡುಬಂದರೆ ಅವರನ್ನು ಮೇಲ್ಮಟ್ಟದ ಎನ್‌ಆರ್‌ಸಿ ಕೇಂದ್ರಗಳಿಗೆ ನಿರ್ದೇಶನ ಮಾಡಿ ಚಿಕಿತ್ಸೆ ಕೊಡಿಸುವಂತೆ ಗ್ರಾಮಮಟ್ಟದಲ್ಲಿ ಅರಿವು ಮೂಡಿಸುವಂತೆ ತಿಳಿಸಿದರು.

ಈ ತರಬೇತಿಯಲ್ಲಿ ಡಾ.ಆನಂದ್ ಗೋಟುರು ಅವರು ಎನ್‌ಎಫ್‌ಎಚ್‌ಎಸ್ 5 ಮತ್ತು 4 ಸಮೀಕ್ಷೆ ಕುರಿತು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀ ಶಿವಾನಂದ ಅವರು ಪಿಪಿಟಿ ಮೂಲಕ ತರಬೇತಿ ನೀಡಿದರು. ಕಾರ್ಯಕ್ರಮದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶರಣಮ್ಮ ಮಾಲಿಪಾಟೀಲ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸೋಮಶೇಖರ್ ಮೇಟಿ, ಶರಣಪ್ಪ ವೆಂಕಟೇಶ್ ಹಾಗೂ ತಾಲೂಕಿನ ಎಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಸಮುದಾಯ ಆರೋಗ್ಯ ಅಧಿಕಾರಿಗಳು ಇದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

ಹುಟ್ಟುಹಬ್ಬ ಎಂದರೆ ಭಯ ಮತ್ತು ಅಸಹ್ಯತರಿಸುವಂತಾಗಿದೆ. ಇಂತಹದ್ದನ್ನು ಯಾರು ಇಷ್ಟಪಡುವುದಿಲ್ಲ.... ನಾವೇನೋ ಸಾಂತ್ವನ ಹೇಳಬಹುದು ಆದರೆ ಕಳೆದು ಹೋದ ಮಕ್ಕಳು ಮತ್ತೆ ಬರುವುದಿಲ್ಲ. ನಿಜ ಅಲ್ಲವೇ...ಮನೆಯವರ ಶೋಕ ನಿತ್ಯ ನಿರಂತರವಾಗಿರುತ್ತದೆ, ಪ್ರತಿ ವರ್ಷ ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುವಾಗ ಈ ಘಟನೆ ನೆನಪಾಗಿ ಹುಟ್ಟುಹಬ್ಬ ಎಂಬುದು ಹಳೆಯ ನೋವನ್ನು ಕೆದಕಲು ಕಾರಣವಾಗುವುದಿಲ್ಲವೇ? ಎಲ್ಲಾ ವೃತ್ತಿಗಳಂತೆ ಚಲನಚಿತ್ರರಂಗದ, ಟಿವಿ ಮಾಧ್ಯಮದ ನಟ ನಟಿಯರು ಕೂಡ ತಮ್ಮ ವೃತ್ತಿಗಳನ್ನು ನಿರ್ವಹಿಸುತ್ತಾರೆ ಎಂದೇಳುವ ನಟ ಯಶ್ ಮಾತುಗಳು ಅಭಿಮಾನಿಗಳ ಮನ ಕಲಕುವಂತಿದೆ...

# ಹುಚ್ಚು ಅಭಿಮಾನದ ಹೊಳೆಯಲ್ಲಿ ಕೊಚ್ಚಿ ಹೋಗದಿರಲಿ ಮಕ್ಕಳು



ಕಳೆದ ಎರಡು ದಿನಗಳ ಹಿಂದೆ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಸೂರಣಗಿ ಎಂಬ ಊರಿನಲ್ಲಿ ತಮ್ಮ ಪ್ರೀತಿಯ ನಾಯಕ ನಟನ ಹುಟ್ಟುಹಬ್ಬಕ್ಕೆ ಸುಮಾರು 25 ಅಡಿಯ ಬೃಹತ್ ಕಟ್ ಔಟ್ ಹಾಕುವಾಗ ವಿದ್ಯುತ್ ಅಪಘಾತಕ್ಕೆ ಈಡಾಗಿ ಮೂರು ಜನ ಯುವಕರು ಮರಣ ಹೊಂದಿದ್ದಾರೆ.... ಇನ್ನೂ ಒಂದಿಬ್ಬರು ಆಸ್ಪತ್ರೆಯಲ್ಲಿ ಜೀವನ್ಮರಣದ ಹೋರಾಟ ನಡೆಸಿದ್ದಾರೆ. ಯುವಕರ ಸಾವಿನ ಸುದ್ದಿಯನ್ನು ಕೇಳಿ ವಿದೇಶದಲ್ಲಿ ಚಿತ್ರೀಕರಣದಲ್ಲಿದ್ದ ನಾಯಕ ನಟ ಯಶ್ ತಮ್ಮೆಲ್ಲ ಚಿತ್ರೀಕರಣವನ್ನು ನಿಲ್ಲಿಸಿ ಗದಗ ಜಿಲ್ಲೆಯ ಸೂರಣಗಿಗೆ ಭೇಟಿ ನೀಡಿ ಯುವಕರ ಪಾಲಕರನ್ನು ಸಂತೈಸಿದ್ದಾರೆ.

ಅತ್ಯಂತ ನೋವಿನಿಂದ ಯಶ್ ಹೇಳಿದ ಮಾತುಗಳು ಅಭಿಮಾನಿಗಳ ಮನ ಕಲಕುವಂತಿದೆ.... ಹುಟ್ಟುಹಬ್ಬ ಎಂದರೆ ಭಯ ಮತ್ತು ಅಸಹ್ಯತರಿಸುವಂತಾಗಿದೆ. ಇಂತಹದ್ದನ್ನು ಯಾರು ಇಷ್ಟಪಡುವುದಿಲ್ಲ.... ನಾವೇನೋ ಸಾಂತ್ವನ ಹೇಳಬಹುದು ಆದರೆ ಕಳೆದು ಹೋದ ಮಕ್ಕಳು ಮತ್ತೆ ಬರುವುದಿಲ್ಲ. ನಿಜ ಅಲ್ಲವೇ...ಮನೆಯವರ ಶೋಕ ನಿತ್ಯ ನಿರಂತರವಾಗಿರುತ್ತದೆ, ಮನೆಯ ಆಧಾರ ಸ್ತಂಭವಾಗಲಿರುವ ಮಕ್ಕಳು ಹೀಗೆ ಏಕಾಏಕಿ ಅವಘಡಕ್ಕೆ ಈಡಾದರೆ ಇದಕ್ಕೆ ಯಾರು ಹೊಣೆ??

ಇನ್ನು ಪ್ರತಿ ವರ್ಷ ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುವಾಗ ಈ ಘಟನೆ ನೆನಪಾಗಿ ಹುಟ್ಟುಹಬ್ಬ ಎಂಬುದು ಹಳೆಯ ನೋವನ್ನು ಕೆದಕಲು ಕಾರಣವಾಗುವುದಿಲ್ಲವೇ?

ಎಲ್ಲಾ ವೃತ್ತಿಗಳಂತೆ ಚಲನಚಿತ್ರರಂಗದ, ಟಿವಿ ಮಾಧ್ಯಮದ ನಟ ನಟಿಯರು ಕೂಡ ತಮ್ಮ ವೃತ್ತಿಗಳನ್ನು ನಿರ್ವಹಿಸುತ್ತಾರೆ. ಇದು ಅವರ ದುಡಿಮೆಯ ಮಾರ್ಗ. ಕನಸು ಕಾಣುವ ಹದಿಹರೆಯದ ಮಕ್ಕಳಿಂದ ಹಿಡಿದು ಮುಪ್ಪಿನ ಮುದುಕರವರೆಗೆ ಅವರು ತಮ್ಮ ಅಭಿನಯದ ಮೂಲಕ ಮಾಡುವ ಮೋಡಿ ತುಸು ಹೆಚ್ಚಿನದು. ಚಲನಚಿತ್ರಗಳಲ್ಲಿ ಭ್ರಾಮಕ ಬದುಕಿನ ಚಿತ್ರಣಗಳು ಇರುತ್ತವೆ. ವ್ಯಕ್ತಿತ್ವ ನಿರ್ಮಾಣದ ಜೊತೆ ಜೊತೆಗೆ, ಪ್ರೀತಿಯ ಹಸಿ ಬಿಸಿ ದೃಶ್ಯಗಳು, ಮನಮಿಡಿಯುವ, ಹಿಂಸೆಯನ್ನು ಪ್ರಚೋದಿಸುವ ದೃಶ್ಯಗಳು ಕೂಡ ಇರುತ್ತವೆ. ಜನನಾಯಕನಾಗುವ, ಒಬ್ಬನೇ ವ್ಯಕ್ತಿ ಹಲವರು ಪಾತ್ರಗಳಲ್ಲಿ ಪರಕಾಯ ಪ್ರವೇಶ ಮಾಡಿ ಜನ ಮನ್ನಣೆ ಗಳಿಸುವ ಅವಕಾಶ ಚಿತ್ರರಂಗದ ನಾಯಕ ನಾಯಕಿಯರಿಗಿರುತ್ತದೆ.

ಸಾಮಾನ್ಯವಾಗಿ ಅದ್ದೂರಿ ತಾರಾಗಣ, ದುಬಾರಿ ವೆಚ್ಚದ ಸೆಟ್ಟುಗಳು, ಸುಂದರ ರಮಣೀಯ ತಾಣಗಳ ಚಿತ್ರೀಕರಣ, ತರಹೇವಾರಿ ದಿರಿಸುಗಳು, ಸಾಹಸ ದೃಶ್ಯಗಳು, ರೋಚಕ ಸನ್ನಿವೇಶಗಳು, ವಿಭಿನ್ನ ತಿರುವುಗಳು, ಮೈಮರೆಯುವ ಸಂಗೀತ ಹೀಗೆ ಹತ್ತು ಹಲವು ಆಕರ್ಷಕ ವಿಷಯಗಳನ್ನು ಒಳಗೊಂಡಿರುವ ಚಲನಚಿತ್ರ ನಮ್ಮನ್ನು ಭಾವನಾತ್ಮಕವಾಗಿ ಮಂತ್ರಮುಗ್ಧರನ್ನಾಗಿಸುತ್ತದೆ, ಇದರಿಂದಾಚೆಗೆ ಅವರು ಕೂಡ ನಮ್ಮ ನಿಮ್ಮಂತೆ ಮನುಷ್ಯರು ವೃತ್ತಿಪರ ಕೆಲಸಗಾರರು ಎಂಬುದನ್ನು ನಾವು ಮರೆತೇ ಬಿಡುತ್ತೇವೆ. ಇತ್ತೀಚೆಗಂತೂ ಕೋಟಿಗಟ್ಟಲೆ ಬಂಡವಾಳ ಹಾಕಿ ಅದ್ದೂರಿ ಚಿತ್ರಗಳನ್ನು ತಯಾರಿಸುವ ಹಲವಾರು ನಿರ್ಮಾಪಕರು ನಮ್ಮಲ್ಲಿದ್ದಾರೆ.

ಮತ್ತೊಮ್ಮೆ ಹೇಳುವುದಾದರೆ ಈ ಚಿತ್ರಗಳಲ್ಲಿ ನಟಿಸುವ ತಾರೆಯರು ನಮ್ಮ ನಿಮ್ಮಂತೆ ಹುಲು ಮನುಷ್ಯರು. ಅವರಲ್ಲಿಯೂ ಕೂಡ ನಮ್ಮಲ್ಲಿರುವಂತೆ ಮಾನವ ಸಹಜ ಸ್ವಭಾವಗಳು, ನ್ಯೂನ್ಯತೆಗಳು ಇರುತ್ತವೆ. ಅವರು ಕೂಡ ತಮ್ಮದೇ ಜೀವನದ ಚಕ್ರವನ್ನು ಸಾಗಿಸಲು ಈ ವೃತ್ತಿಯನ್ನು ಆರಿಸಿಕೊಂಡಿರುತ್ತಾರೆ. ಎಲ್ಲಾ ವೃತ್ತಿಗಳಲ್ಲಿ ಇರುವಂತೆಯೇ ಈ ವೃತ್ತಿಯಲ್ಲಿಯೂ ಏರಿಳಿತಗಳು ತುಸು ಹೆಚ್ಚೇ ಇರುತ್ತವೆ. ಈ ವೃತ್ತಿಯ ವೈಶಿಷ್ಟ್ಯವೆಂದರೆ ಇವರು ಬಲು ಬೇಗ ಗುರುತಿಸಲ್ಪಡುತ್ತಾರೆ, ಆಕರ್ಷಿಸಲ್ಪಡುತ್ತಾರೆ, ಪ್ರಸಿದ್ಧರಾಗುತ್ತಾರೆ. ಬಣ್ಣದ ಲೋಕದ ಗ್ಲಾಮರ್ರೆ ಅಂತದ್ದು. ಬೆಳಕಿನಲ್ಲಿ ಶೂಟಿಂಗ್ ಮಾಡಿ ಕತ್ತಲಲ್ಲಿ ಕೂರಿಸಿ ಭ್ರಾಮಕ ಲೋಕದ ಪ್ರಪಂಚವನ್ನು ತೋರಿಸುವ ಸಿನಿಮಾಗಳು ಎಷ್ಟೋ ಬಾರಿ ನಮ್ಮ ಬದುಕಿನ ಹಲವಾರು ಸಮಸ್ಯೆಗಳಿಗೆ ಪರಿಹಾರವಾಗಬಲ್ಲವು.



**ವೀಣಾ ಹೇಮಂತಗೌಡ ಪಾಟೀಲ್,**
**ಮುಂಡರಗಿ, ಗದಗ**

ಚಲನಚಿತ್ರಗಳ ನಟ ನಟಿಯರನ್ನು ಚುನಾವಣಾ ಕ್ಯಾಂಪೇನ್ಗಳಿಗೆ ಕರೆತರುವುದು ಜನರನ್ನು ಆಕರ್ಷಿಸಲು, ಒಗ್ಗೂಡಿಸಲು. ಅಲ್ಲಿ ತಮ್ಮ ಅಭಿಮಾನದ ನಾಯಕನನ್ನು ನೋಡಲು ಬರುವ ಆತನೊಂದಿಗೆ ಫೋಟೋ ತೆಗೆಸಿಕೊಳ್ಳಲು ಪ್ರಯತ್ನಿಸುವುದು, ಅವರ ಚಿತ್ರಗಳನ್ನು ಮೈ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದು, ಅವರಂತೆ ಕೇಶವಿನ್ಯಾಸ ಮಾಡಿಸಿಕೊಳ್ಳುವುದು ಅವರಂತೆ ನಡಿಗೆ,ಉಡುಗೆ ತೊಡುಗೆಗಳನ್ನು ಧರಿಸಿ ನಮ್ಮ ಅಭಿಮಾನವನ್ನು ಮೆರೆಯುವುದು. ಅವರ ಹೊಸ ಚಿತ್ರಗಳು ಬಿಡುಗಡೆಯಾದಾಗ ಬೃಹದಾಕಾರದ ಕಟೌಟುಗಳನ್ನು ನಿಲ್ಲಿಸಿ ಅವುಗಳಿಗೆ ಹಾರ ಹಾಕಿ ಹಾಲಿನ ಅಭಿಷೇಕ ಮಾಡುವ ಮೂಲಕ ತಮ್ಮ ಅಭಿಮಾನದ ಪರಾಕಾಷ್ಟೆಯನ್ನು ಮೆರೆಯುವುದು, ಇನ್ನು ಕೆಲವೊಮ್ಮೆ ಅವರ ಹುಟ್ಟುಹಬ್ಬಗಳಿಗೆ ದೂರದೂರುಗಳಿಂದ ವಾಹನಗಳನ್ನು ಬಾಡಿಗೆ ಮಾಡಿಕೊಂಡು ಬಂದು ಅವರ ಮನೆಯ ಮುಂದೆ ಠಿಕಾಣಿ ಹೂಡಿ ಕೇಕ್ ಕತ್ತರಿಸಲು ಫೋಟೋ ತೆಗೆಸಿಕೊಳ್ಳಲು ಅವರನ್ನು ಆಗ್ರಹಿಸುವುದು, ಇನ್ನು ಕೆಲವರು ತಮ್ಮ ಊರುಗಳಿಂದ ಸೈಕಲ್ ಮೇಲೆ ಸವಾರಿ ಮಾಡಿಕೊಂಡು, ಕಾಲ್ನಡಿಗೆಯಲ್ಲಿ ನಡೆದು ಬಂದು ತಮ್ಮ ಅಭಿಮಾನವನ್ನು ಮರೆಯುತ್ತಾರೆ .... ಒಂದೇ ಎರಡೇ, ಇವರು ಮಾಡುವ ಅನಾಹುತಗಳು.



ಚಲನಚಿತ್ರಗಳಲ್ಲಿ ನಟಿಸುವ ನಟ ನಟಿಯರು ಚಿತ್ರಗಳಲ್ಲಿ ಅವರು ಅಭಿನಯಿಸಿದ ಪಾತ್ರವೇ ತಾವಾಗಿ ಅವರನ್ನು ನಾವು ಕೂಡ ಆರಾಧಿಸುತ್ತೇವೆ. ಅಭಿಮಾನ ತಪ್ಪಲ್ಲ ನಿಜ... ಆದರೆ ಹುಚ್ಚು ಅಭಿಮಾನ ಖಂಡಿತ ತಪ್ಪು.

ಉದ್ಯಾನದಲ್ಲಿ ಬೆಳೆದ ಹೂಗಳನ್ನು ಕಂಡು ನಾವು ಆನಂದ ಪಡುತ್ತೇವೆಯೇ ಹೊರತು, ಅವುಗಳನ್ನು ಕೀಳುವುದಿಲ್ಲ.ಅಂತೆಯೇ ನಾವು ಯಾರನ್ನಾದರೂ ಅಭಿಮಾನಿಸುತ್ತಿದ್ದರೆ, ಪ್ರೀತಿಸುತ್ತಿದ್ದರೆ ಅವರನ್ನು ದೂರದಿಂದಲೇ ನೋಡಿ ಆನಂದ ಪಡೋಣ. ಅವರಿಗೂ ಸಾಮಾನ್ಯರಂತೆ ಓಡಾಡಲು, ಉಸಿರಾಡಲು ಅವಕಾಶ ಕೊಡೋಣ. ಅವರು ಕೂಡ ನಮ್ಮಲ್ಲಿ ಒಬ್ಬರಾಗಲಿ. ನಮ್ಮ ಹುಚ್ಚು ಪ್ರೀತಿ, ಅಭಿಮಾನ ಅವರಿಗೆ ಉಸಿರು ಕಟ್ಟಿಸದಿರಲಿ.

ಚಲನಚಿತ್ರ ನಟರಿಗೆ, ಕ್ರಿಕೆಟ್ ಆಟಗಾರರಿಗೆ, ಸಾರ್ವಜನಿಕ ಜೀವನದಲ್ಲಿ ಇರುವವರಿಗೆ ಈ ರೀತಿಯ ಅಭಿಮಾನ ಕೊಂಚಮಟ್ಟಿಗೆ ಅಪ್ಯಾಯಮಾನವೇ ನಿಜ. ಆದರೆ ಅತಿಯಾದ ಅಭಿಮಾನ ಅವರ ಸ್ವಾತಂತ್ರ್ಯವನ್ನು ಕಸಿದು ಹಾಕುತ್ತದೆ. ಯಾವುದೇ ಸ್ಥಳಗಳಿಗೆ ಹೋಗಿ ಬರಲು ತೊಂದರೆಯಾಗುತ್ತದೆ. ಖಾಸಗಿ ಸಮಯಗಳು ಕೂಡ ಇಲ್ಲವಾಗುತ್ತದೆ. ಅಂತೆಯೇ ಕೆಲವೊಮ್ಮೆ ವಿಪರೀತ ಜನ ಸೇರಿದಾಗ ನೂಕುನುಗ್ಗಲಿನಲ್ಲಿ ಅವರು ತಮ್ಮ ಸಣ್ಣ ಪುಟ್ಟ ವಸ್ತುಗಳನ್ನು ಕಳೆದುಕೊಳ್ಳುವುದು ಉಂಟು. ಜೊತೆ ಜೊತೆಗೆ ಮಾನವ ಸಹಜವಾಗಿ ಸಿಟ್ಟು ಬೇಸರಗಳಿಗೆ ಈಡಾಗಿ ಅಭಿಮಾನಿಗಳನ್ನು ಗದರಿಸಿದಾಗ ಅದು ದೊಡ್ಡ ಸುದ್ದಿಯಾಗಿ ಟಿವಿ ಚಾನಲ್ಲಗಳಲ್ಲಿ ಬಿತ್ತರ ವಾಗಬಹುದು.

ತಮ್ಮ ಖಾಸಗಿತನವನ್ನು ರಕ್ಷಿಸಿಕೊಳ್ಳಲು ಎಷ್ಟೋ ಬಾರಿ ಅಭಿಮಾನಿಗಳ ಹುಚ್ಚು ಪ್ರೀತಿಯಿಂದ ತೊಂದರೆಗೊಳಗಾಗದಿರಲು ಈ ಚಲನಚಿತ್ರ ನಟರು ತಮ್ಮ ರಕ್ಷಣೆಗೆ ಅಂಗರಕ್ಷಕರನ್ನು ಬೌನ್ಸರ್ಗಳನ್ನು ಇಟ್ಟುಕೊಳ್ಳುತ್ತಾರೆ. ಇದು ಕ್ಲೀಶೆಯ ವಿಷಯವಲ್ಲವೇ?? ಅವರ ಅಂಗರಕ್ಷಕರು, ಬೆಂಗಾವಲು ಪಡೆಯವರು ಜನರನ್ನು ನಿಯಂತ್ರಿಸುವ ಸಾಹಸ ಮಾಡುತ್ತಾ ತಮ್ಮ ಒಡೆಯರನ್ನು ರಕ್ಷಿಸಿಕೊಳ್ಳುತ್ತಾರೆ. ಇದು ಆಧುನಿಕ ಯುಗದ ಚೋದ್ಯವಲ್ಲವೇ??

ವಿಪರೀತ ಮಳೆ ಬಂದಾಗ ಹೊಳೆಗಳಲ್ಲಿ ನೀರು ಹೆಚ್ಚಾಗಿ ಪ್ರವಾಹವಾಗಿ ಮಾರ್ಪಡುತ್ತದೆ. ಈ ರೀತಿ ಪ್ರವಾಹವಾಗಿ ಮಾರ್ಪಟ್ಟ ಹುಚ್ಚು ಹೊಳೆಯಲ್ಲಿ ದಾಟಿ ಹೋಗಲು ಪ್ರಯತ್ನಿಸಿದವರು ನೀರು ಪಾಲಾಗುತ್ತಾರೆ. ಎಷ್ಟೋ ಬಾರಿ ಅವರ ಹೆಣಗಳು ಕೂಡ ದೊರೆಯುವುದಿಲ್ಲ... ಪ್ರಕೃತಿಯ ಮುಂದೆ ನಾವೆಲ್ಲ ಹುಲ್ಲಿನ ಕಣಗಳಿಗೆ ಸಮಾನ.

ಅಂತಹದ್ದೇ ಅಭಿಮಾನ ನಾವು ಇಷ್ಟಪಡುವ ತಾರೆಗಳ ಮೇಲೆ ಇರುವುದು ಸಹಜ,ಆದರೆ ನಮ್ಮ ಹುಚ್ಚು ಅಭಿಮಾನದ ಪ್ರೀತಿಯಲ್ಲಿ ನಾವೇ ಕೊಚ್ಚಿ ಹೋಗುವುದು ಬೇಡ. ಪ್ರೀತಿ ವಿಶ್ವಾಸ ಒತ್ತಟ್ಟಿಗೆ ಇರಲಿ ಆದರೆ ಬದುಕು ಅದಕ್ಕಿಂತ ದೊಡ್ಡದು. ನಮಗಾಗಿ, ನಮ್ಮವರಿಗಾಗಿ ನಾವು ಬದುಕಲೇಬೇಕು. ಅತಿಯಾದ ಚಿನ್ನದ ಆಸೆ ಹೊಂದಿದ ಮಿಡಾಸನ ಕಥೆ ಗೊತ್ತಿದೆಯಲ್ಲವೇ... ಅಂತಹ ಪರಿಸ್ಥಿತಿ ಮುಂದೆ ಯಾರಿಗೂ ಬರದಿರಲಿ. ಅಭಿಮಾನದ ಹುಚ್ಚು ಹೊಳೆಯಲ್ಲಿ ಯಾರ ಮನೆಯ ಮಕ್ಕಳೂ ಕೊಚ್ಚಿ ಹೋಗದಿರಲಿ ಎಂದು ಆಶಿಸುತ್ತ





**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಫ್ರಾನ್ಸ್‌ನ ಪ್ಯಾರಿಸ್ ಪ್ರಾಂತ್ಯದ ಅಧ್ಯಕ್ಷರಾದ ವೆಲೆರಿ ಪಿಕಸೆ (Ms Velerie Pecresse) ಅವರು ಇಂದು ಕರ್ನಾಟಕ ಸರ್ಕಾರದೊಂದಿಗೆ ಆರ್ಥಿಕ ಸಹಕಾರದ ಒಪ್ಪಂದಕ್ಕೆ ಸಹಿ ಮಾಡಿದರು. ರಾಜ್ಯ ಸರ್ಕಾರದ ಪರವಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್ ಅವರು ಒಪ್ಪಂದ ಸಹಿ ಮಾಡಿದರು. ಈ ಸಂದರ್ಭದಲ್ಲಿ ಪ್ಯಾರಿಸ್ ಪ್ರಾಂತ್ಯದ ಸಚಿವರು, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಕವಿ ಮನಸು**

## ಹ್ಯಾಂಗ ಬಿಟ್ಹೋಗಲೆವ್ವ

ಎಲ್ಲೋ ಇದ್ದ ನಿನ್ನ
ಇಲ್ಲಿ ಕರೆತಂದು
ನೀ ಇದ್ದಂಗ ಇರು ಎಂದು
ನಿನ್ನ ಮಗನಂತೆ ಆರೈಕೆ ಮಾಡಿ
ತುತ್ತುಣುಸಿದ ನಿನ್ನ ಹ್ಯಾಂಗ ಬಿಟ್ಹೋಗಲೆವ್ವ

ನೀ ತೋರಿದ ನಿಸ್ವಾರ್ಥ ಪ್ರೀತಿ
ನಾ ಎಲ್ಲೂ ನೋಡಿಲ್ಲ
ನಿನ್ನ ಕಾಳಜಿಯ ನಿಟ್ಟುಸಿರು
ನನಗೆ ಅರ್ಥವಾಗಲಿಲ್ಲ
ಅಪ್ಪಿ ಮುದ್ದಾಡಲು ನೀ ನನ್ನೊಂದಿಗಿರಲಿಲ್ಲ
ಅದ್ಯಾಂಗ ಬಿಟ್ಹೋಗಲೆವ್ವ ನಿನ್ನಾ....

ನಿನ್ನ ಆರೋಗ್ಯ ಹದಗೆಟ್ಟಾಗ
ನನ್ನ ಕಣ್ಣಂಚಲ್ಲಿ ಮಿಂದ ಕಂಬನಿ
ನೀ ಮಗುವಂತೆ ಹೆಗಲಮೇಲೆ
ಮಲಗಿದಾಗ
ನಿನ್ನ ನಿಟ್ಟುಸಿರು ನಾ ಮೌನಿಯಾಗುವಂತೆ
ಮಾಡಿತವ್ವ ಅದ್ಯಾಂಗ ಬಿಟ್ಹೋಗಲೆವ್ವ
ನಿನ್ನಾ....

ಯಾರೋ ಮಾಡಿದ ತಪ್ಪಿಗೆ
ನೀ ಶರಣಾಗುವುದು ಬೇಡ
ಗುಡಿ ಗುಂಡಾರ ಮಸೀದಿ
ಚರ್ಚ್ಗಳಲ್ಲಿ ಮಲಗಬೇಡವ್ವ
ನಿನ್ನ ಮಗನಂತೆ ನಾನೀರುವೆನವ್ವ
ನಿನ್ನ ಬಿಟ್ಟು ನಾ ದೂರ ಅದ್ಯಾಂಗ
ಹೋಗಲೆವ್ವ....

– ರಾಹುಲ್ ಸರೋದೆ
ಗಂಗಾವತಿ

## ಆಸೆ ಎಲ್ಲಿಂದ ಕಲಿತ

ಭೂಮಿಗೆ ಬಿದ್ದ ಬೀಜಕ್ಕೆ
ಮೊಳಕೆ ಹೊಡೆಯುವಾಸೆ
ಮೊಳಕೆಗೆ ಭೂಮಿಯ
ಸೀಳಿಕೊಂಡುಎಲೆಯಾಗುವಾಸೆ
ಎಲೆಗೆ.......ಚಿಗುರಿನ
ಸಿಂಗಾರವಾಗುವಾಸೆ
ಚಿಗುರಿಗೆ ರೆಂಬೆಗಳಾಗುವಾಸೆ
ರೆಂಬೆಗೆ ಹೂ.ಬಿಡುವಾಸೆ
ಹೂವಿಗೆ ಕಾಯಾಗುವಾಸೆ
ಕಾಯಿಗೆ ಹಣ್ಣಾಗುವಾಸೆ
ಹಣ್ಣಿಗೆ ಜೀವಿಗಳ
ಆಹಾರವಾಗುವಾಸೆ
ಇಂತೆಲ್ಲಾ ಆಸೆಗಳು
ಪರೋಪಕ್ಕಾಗಿ ಇರುವಾಗ
ಇದ ಬಳಸಿ ಮಾನವ ಎಲ್ಲಾ
ತನಗೆ ಬೇಕೆಂಬಾಸೆ......
.........ಎಲ್ಲಿಂದ ಕಲಿತ?

– ಜಿ ಆರ್ ಬಸವರಾಜೇಶ್ವರಿ
ಸರ್ಕಾರ ಪ್ರೌಢಶಾಲೆ ಹಗರಿಗಜಾಪುರ

## ತುಂಗಭದ್ರಾ ನೀರಿನ ಮಟ್ಟ



| ಮಂಗಳವಾರ : 09-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.00 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.213 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1622.70 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8187 ಕ್ಯುಸೆಕ್ |
| ಸಾಮರ್ಥ್ಯ | 69.231 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಕ್ರಿಯಾ ಯೋಜನೆ ಸಮರೋಪಾದಿಯಲ್ಲಿ ಅನುಷ್ಠಾನಕ್ಕೆ ಸಿಎಂ ಖಡಕ್ ಸೂಚನೆ

## ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಪ್ರಗತಿ ಪರಿಶೀಲಾ ಸಭೆ

■ **ಹಂಪಿ ಟೈಮ್ಸ್ ಬೆಂಗಳೂರು**

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಪ್ರಸಕ್ತ ವರ್ಷದ ಕ್ರಿಯಾ ಯೋಜನೆಯನ್ನು ತ್ವರಿತ ಅನುಷ್ಠನ ಮಾಡಿ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಅವರು ಇಂದು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಪ್ರಗತಿ ಪರಿಶೀಲನೆ ನಡೆಸಿದರು. ಮಂಡಳಿಯಲ್ಲಿ ಪ್ರಸ್ತುತ 2106 ಕೋಟಿ ಲಭ್ಯವಿದೆ. ಸರ್ಕಾರ ಅಧಿಕಾರಕ್ಕೆ ಬಂದ ನಂತರ 757.66 ಕೋಟಿ ರೂ. ವೆಚ್ಚ ಮಾಡಲಾಗಿದೆ, ಈ ಆರ್ಥಿಕ ವರ್ಷಾಂತ್ಯದ ವೇಳೆಗೆ ಇನ್ನೂ ಒಂದು ಸಾವಿರ ಕೋಟಿ ರೂ. ವೆಚ್ಚ ಆಗುವ ಸಾಧ್ಯತೆಗಳಿವೆ. ಇದಕ್ಕಾಗಿ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸುವಂತೆ, ಮಂಡಳಿಯ ಅಧ್ಯಕ್ಷರು, ಕಲ್ಯಾಣ ಕರ್ನಾಟಕದ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರುಗಳು ಹಾಗೂ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಿಯಮಿತವಾಗಿ ಪ್ರಗತಿ ಪರಿಶೀಲನೆ ನಡೆಸಿ, ಹಿನ್ನಡೆ ಕಂಡಿರುವ ಯೋಜನೆಗಳ ತ್ವರಿತ ಅನುಷ್ಠಾನ ಮಾಡಬೇಕು. ಪ್ರಾರಂಭವಾಗದ ಕಾಮಗಾರಿಗಳನ್ನು ಮರುಪರಿಶೀಲನೆ ಮಾಡಿ, ಬದಲಿಸುವ ಮೂಲಕ ಸಕಾಲದಲ್ಲಿ ಅನುದಾನ ವೆಚ್ಚ ಮಾಡುವಂತೆ ಸೂಚಿಸಿದರು. ಕಾಮಗಾರಿಗಳ ಅನುಷ್ಠಾನಕ್ಕೆ ನೀಲ ನಕ್ಷೆ ರೂಪಿಸಿ, ಅದರಂತೆ ಕಾರ್ಯನಿರ್ವಹಿಸಲು ಸೂಚಿಸಿದರು.



ಮುಂದಿನವರ್ಷದಕ್ರಿಯಾಯೋಜನೆಯನ್ನು ಮಾರ್ಚ್ ಅಂತ್ಯದ ಒಳಗೆ ರೂಪಿಸುವಂತೆ ಸೂಚಿಸಿದರು. ಎಸ್.ಸಿ.ಎಸ್.ಪಿ. / ಟಿ.ಎಸ್.ಪಿ. ಅಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ಜನಸಂಖ್ಯೆ ಶೇ. 50 ಕ್ಕೂ ಹೆಚ್ಚಾಗಿ ವಾಸವಿರುವ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಸೂಚಿಸಿದರು.

ಪ್ರಗತಿಯಲ್ಲಿರುವ ಕೆಲಸಗಳನ್ನೆಲ್ಲ ಈ ವರ್ಷವೇ ಪೂರ್ಣಗೊಳಿಸಬೇಕು. ಹಿಂದಿನ ವರ್ಷದ ಕಾಮಗಾರಿಗಳನ್ನು ಆದಷ್ಟು ಶೀರ್ಘ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಕೆಕೆಆರ್ ಡಿಬಿ ಅಧ್ಯಕ್ಷರಾದ ಅಜಯ್ ಸಿಂಗ್, ಸಚಿವರುಗಳಾದ ಶರಣ ಪ್ರಕಾಶ್ ಪಾಟೀಲ್, ಈಶ್ವರ್ ಖಂಡ್ರೆ, ಜಮೀರ್ ಅಹಮದ್ ಖಾನ್, ಶರಣಬಸಪ್ಪ ದರ್ಶನಾಪುರ, ಪ್ರಿಯಾಂಕ್ ಖರ್ಗೆ, ಶಿವರಾಜ್ ತಂಗಡಗಿ, ಬೋಸ್ ರಾಜು, ರಹೀಂ ಖಾನ್, ಡಿ.ಸುಧಾಕರ್ ಜತೆಗೆ ಮುಖ್ಯಮಂತ್ರಿಗಳರಾಜಕೀಯಸಲಹೆಗಾರರಾದ ಬಿ.ಆರ್.ಪಾಟೀಲ್, ಆರ್ಥಿಕ ಸಲಹೆಗಾರ ಬಸವರಾಜ ರಾಯ ರೆಡ್ಡಿ, ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು, ನಸೀರ್ ಅಹಮದ್ ಸಭೆಯಲ್ಲಿ ಭಾಗಿಯಾದರು.

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಎಲ್.ಕೆ.ಅತೀಕ್ ಸೇರಿ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



# ಬಳ್ಳಾರಿ ಆಗ್ರೋ ಪ್ರೊಸೆಸ್ಸಿಂಗ್ ಕ್ಲಸ್ಟರ್ ನಿರ್ಮಾಣಕ್ಕೆ ಪ್ರಸ್ತಾವನೆ

**ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ | ಸಂಬಾರು ಪದಾರ್ಥಗಳ ಖರೀದಿದಾರರ ಮತ್ತು ಮಾರಾಟಗಾರರ ಸಮಾವೇಶ**




■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಕೆಎಂಇಆರ್‌ಸಿ ಅನುದಾನದಲ್ಲಿ ರೂ.20 ಕೋಟಿ ಹೆಚ್ಚಿನ ವೆಚ್ಚದಲ್ಲಿ ಬಳ್ಳಾರಿ ಆಗ್ರೋ ಪ್ರೊಸೆಸ್ಸಿಂಗ್ ಕ್ಲಸ್ಟರ್ (ಬಿಎಪಿಸಿ) ನಿರ್ಮಾಣಕ್ಕೆ ರಾಜ್ಯ ಗಣಿ–ಪರಿಸರ ಪುನಶ್ಚೇತನ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಹುಬ್ಬಳ್ಳಿ, ಭಾರತೀಯ ಸಂಬಾರು ಮಂಡಳಿ ಕೊಚ್ಚಿನ್ ಹಾಗೂ ತೋಟಗಾರಿಕೆ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಹೋಟೆಲ್ ರಾಯಲ್ ಫೋರ್ಟ್‌ನಲ್ಲಿ ಏರ್ಪಡಿಸಲಾಗಿದ್ದ ಸಂಬಾರು ಪದಾರ್ಥಗಳ ಖರೀದಿದಾರರ ಮತ್ತು ಮಾರಾಟಗಾರರ ಸಮಾವೇಶ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಬಳ್ಳಾರಿ ಜಿಲ್ಲೆಯು ಮೆಣಸಿನಕಾಯಿ ಬೆಳೆಗೆ ಹೆಸರುವಾಸಿಯಾಗಿದೆ. ನಮ್ಮ ಭಾಗದ ರೈತರಿಗೆ ಸ್ಥಳೀಯವಾಗಿ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿ ಹಾಗೂ ಜಿಲ್ಲೆಯ ಬಹುದಿನದ ಬೇಡಿಕೆಯಾಗಿದ್ದ ಬಿಎಪಿಸಿ (ಬಳ್ಳಾರಿ ಆಗ್ರೋ ಪ್ರೊಸೆಸಿಂಗ್ ಕ್ಲಸ್ಟರ್) ನಿರ್ಮಾಣಕ್ಕೆ ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತದಿಂದ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳಿಗೆ ಉತ್ತೇಜನ ಮತ್ತು ಮಾರುಕಟ್ಟೆ ವ್ಯವಸ್ಥೆಗೆ ಪ್ರೋತ್ಸಾಹ ನೀಡುತ್ತಿದೆ. ಖರೀದಿದಾರರ ಮತ್ತು ಮಾರಾಟಗಾರರ ಸಹಕಾರ ಅಗತ್ಯವಿದೆ ಎಂದರು.

ಕೇರಳದ ಕೊಚ್ಚಿನ್‌ನ ಭಾರತೀಯ ಸಂಬಾರು ಮಂಡಳಿಯ (ಅಭಿವೃದ್ಧಿ) ನಿರ್ದೇಶಕ ಧರಮೇಂದರ್ ದಾಸ್ ಅವರು ಮಾತನಾಡಿ, ಕರ್ನಾಟಕ ರಾಜ್ಯವು ಮಸಾಲೆ ಪದಾರ್ಥಗಳ ಉತ್ಪಾದನೆ, ಮೌಲ್ಯವರ್ಧನೆ ಮತ್ತು ರಫ್ತುಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೇಶದಲ್ಲಿ ಕರ್ನಾಟಕ ರಾಜ್ಯವು ಮೆಣಸಿನಕಾಯಿ ಉತ್ಪಾದನೆಯಲ್ಲಿ 4ನೇ ಸ್ಥಾನದಲ್ಲಿದೆ ಮತ್ತು ಭಾರತದ ಮಸಾಲೆ ಕ್ಷೇತ್ರದಲ್ಲಿ ಮಹತ್ವದ ಸ್ಥಾನವನ್ನು ಹೊಂದಿದೆ ಎಂದು ಹೇಳಿದರು.

ಭಾರತವು ನಾನಾ ಮಸಾಲೆಗಳ ತವರು ಭೂಮಿಗೆ ಹೆಸರುವಾಸಿಯಾಗಿದೆ. 2022–23 ರ ಅವಧಿಯಲ್ಲಿ ಭಾರತವು 14 ಲಕ್ಷ ಮೆಟ್ರಿಕ್ ಟನ್ ಮಸಾಲೆ ಹಾಗೂ ಮಸಾಲೆ ಉತ್ಪನ್ನಗಳನ್ನು ರಫ್ತು ಮಾಡಿದೆ. 2030 ರ ವೇಳೆಗೆ 10 ಶತಕೋಟಿ ಡಾಲರ್‌ಗಳನ್ನು ಸಾಧಿಸಲು ಭಾರತ ದೇಶವು ಮಸಾಲೆ ರಫ್ತು ಗುರಿಯನ್ನು ಹೊಂದಿದೆ. ಅದೇರೀತಿಯಾಗಿ ದೇಶದಿಂದ ಮಸಾಲೆಗಳ ರಫ್ತು ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರವು ಸಮಾವೇಶಗಳ ಮೂಲಕ ಪರಿಚಯಿಸುತ್ತಿದೆ. ಖರೀದಿದಾರರು ಮತ್ತು ಮಾರಾಟಗಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಭಾರತೀಯ ಸಂಬಾರು ಮಂಡಳಿಯು ರೈತರ ಉತ್ಪನ್ನಗಳನ್ನು ನೇರವಾಗಿ ಮಾರಾಟ ಮಾಡಲು ಮತ್ತು ಅವರ ಕೃಷಿ ಉತ್ಪನ್ನಗಳ ಗರಿಷ್ಠ ಬೆಲೆಯನ್ನು ಪಡೆಯಲು ಖರೀದಿದಾರರೊಂದಿಗೆ ನೇರವಾಗಿ ವ್ಯಾಪಾರ ಸಂಪರ್ಕವನ್ನು ರಚಿಸುವ ಮೂಲಕ ರಫ್ತುಗಳನ್ನು ಬೆಂಬಲಿಸಲು ಸಾಮಾನ್ಯ ವೇದಿಕೆಯನ್ನೂ ಕಲ್ಪಿಸುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಎನ್.ಎಂ.ಯಶವಂತ್ ರಾಜ್ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಹೊರತಂದ "ಮೆಣಸಿನಕಾಯಿ ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು" ಎಂಬ ಕಿರು ಪುಸ್ತಕವನ್ನು ಗಣ್ಯರು ಬಿಡುಗಡೆ ಮಾಡಿದರು. ನಂತರದಲ್ಲಿ ಸಂಬಾರು ಪದಾರ್ಥಗಳ ಖರೀದಿದಾರ ಮತ್ತು ಮಾರಾಟಗಾರರ ಸಮಾವೇಶ ನಡೆಯಿತು.

ಸಮಾವೇಶದಲ್ಲಿ ನಾನಾ ತಳಿಗಳ ಮೆಣಸಿನಕಾಯಿ ಸೇರಿದಂತೆ ಇತರೆ ತೋಟಗಾರಿಕೆ ಬೆಳೆಯ ಪದಾರ್ಥಗಳನ್ನು ಪ್ರದರ್ಶನಕ್ಕೆ ಇರಿಸಲಾಗಿತ್ತು.

ಈ ಸಂದರ್ಭದಲ್ಲಿ ಮುನಿರಾಬಾದ್ ತೋಟಗಾರಿಕೆ ಮಹಾವಿದ್ಯಾಲಯದ ಸಸ್ಯರೋಗಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ.ರಾಘವೇಂದ್ರ ಆಚಾರಿ, ಮುನಿರಾಬಾದ್ ತೋಟಗಾರಿಕೆ ಮಹಾವಿದ್ಯಾಲಯದ ಕೃಷಿ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಸಿ.ಜಿ.ಯಾದವ್, ಭಾರತೀಯ ಸಂಬಾರು ಮಂಡಳಿಯ (ಮಾರುಕಟ್ಟೆ) ಉಪನಿರ್ದೇಶಕ ಎಂ.ಮಣಿಕಂದನ, ಕೈಗಾರಿಕೆ ಮತ್ತು ವಾಣಿಜ್ಯೋದ್ಯಮ ಇಲಾಖೆಯ ವಿಶ್ವೇಶ್ವರಯ್ಯ ಟ್ರೇಡ್ ಪ್ರೊಮೋಶನ್ ಸೆಂಟರ್‌ನ ಉಪನಿರ್ದೇಶಕ ಮನಸೂರ, ಸಕಲೇಶಪುರ ಭಾರತೀಯ ಸಂಬಾರು ಮಂಡಳಿಯ ಉಪನಿರ್ದೇಶಕ ಎಂ.ವೈ.ಹೊನ್ನುರ, ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಹುಬ್ಬಳ್ಳಿಯ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್. ಗಿರೀಶ್, ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಹುಬ್ಬಳ್ಳಿ (ಅಭಿವೃದ್ಧಿ ಸಂಸ್ಕರಣೆ ಮತ್ತು ಹೆಚ್‌ಆರ್‌ಡಿ) ಪ್ರಧಾನ ವ್ಯವಸ್ಥಾಪಕ ಸಿದ್ಧರಾಮಯ್ಯ ಎಂ.ಬರಗಿಮಠ, ಜಿಪಂ ತೋಟಗಾರಿಕೆ ಉಪನಿರ್ದೇಶಕ ಸಂತೋಷ್ ಸಪ್ಪಂಡಿ, ಕೃಷಿ ಇಲಾಖೆಯ ಉಪ ನಿರ್ದೇಶಕ ಡಾ.ಎನ್.ಕೆಂಗೇಗೌಡ, ಜಿಲ್ಲಾ ಕೈಗಾರಿಕಾ ಮತ್ತು ತರಬೇತಿ ಕೇಂದ್ರದ ಜಂಟಿ ನಿರ್ದೇಶಕ ಸೋಮಶೇಖರ ಸೇರಿದಂತೆ ಕರ್ನಾಟಕ ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಹುಬ್ಬಳ್ಳಿಯ ಆಡಳಿತ ಮಂಡಳಿಯ ಸರ್ವ ಸದಸ್ಯರು, ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ವಾಂತಿಭೇಧಿ ಪ್ರಕರಣ ಹೆಚ್ಚಳ ಬೀದಿ ಬದಿ ತಿಂಡಿ ಊಟಕ್ಕೆ ಬ್ರೇಕ್

## ನಗರಸಭೆ ಪೌರಾಯುಕ್ತರಿಗೆ ಜಿಲ್ಲಾಧಿಕಾರಿಗಳ ಸೂಚನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹೊಸಪೇಟೆಯ ನಗರ ಪ್ರದೇಶಗಳಲ್ಲಿ ವಾಂತಿ–ಭೇದಿ ಪ್ರಕರಣಗಳು ಹೆಚ್ಚಾಗುತ್ತಿದ್ದು, ಈ ಕುರಿತು ಮುಂಜಾಗ್ರತಾ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಹೊಸಪೇಟೆ ನಗರಸಭೆ ಆಯುಕ್ತರಿಗೆ ನಿರ್ದೇಶನ ನೀಡಿದ್ದಾರೆ.

ಕಳೆದೆರಡು ದಿನಗಳಿಂದ ಹೊಸಪೇಟೆಯ ನಗರ ಪ್ರದೇಶಗಳಲ್ಲಿ ಅಲ್ಲಲ್ಲಿ ತೀವ್ರ ವಾಂತಿ–ಭೇದಿ ಪ್ರಕರಣಗಳು ಕಂಡುಬಂದಿವೆ. ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ನಗರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬೀದಿ ಬದಿಯ ತಿಂಡಿ–ಊಟ ಮಾರಾಟ ಬಂಡಿಗಳನ್ನು ಮೂರು ದಿನಗಳ ಕಾಲ ಕಡ್ಡಾಯ ಮುಚ್ಚಲು ಸೂಕ್ತ ಕ್ರಮ ವಹಿಸಲು ಸೂಚಿಸಲಾಗಿದೆ ಹಾಗೂ ಸಾರ್ವಜನಿಕರಿಗೆ ಆರ್‌ಓ ಫಿಲ್ಟರ್ ಮುಖಾಂತರ ನೀರನ್ನು ಕುಡಿಯುವಂತೆ, ಕಾಯಿಸಿ ಆರಿಸಿದ ನೀರನ್ನು ಕುಡಿಯುವಂತೆ ಮುಂಜಾಗ್ರತೆಯನ್ನು ವಹಿಸಲು ಪ್ರಚಾರ ಕಾರ್ಯಕ್ರಮ ಹಮ್ಮಿಕೊಳ್ಳಲು, ಮುಂದುವರೆದು ಎಲ್ಲಾ ಹೊಟೇಲ್‌ಗಳಲ್ಲಿ ಸ್ವಚ್ಚತಾ ಮಾರ್ಗಸೂಚಿಗಳನ್ನು, ಆಹಾರ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲಾಗುತ್ತಿದೆಯೇ ಎಂಬ ಬಗ್ಗೆ ನಿಗಾವಹಿಸಲು ಹಾಗೂ ಪ್ರತಿ ನಿತ್ಯ ಮನೆಗಳಿಗೆ ಸರಬರಾಜಾಗುವ ಕುಡಿಯುವ ನೀರನ್ನು ಶುದ್ದಗೊಳಿಸಲಾಗುತ್ತಿದೆಯೇ ಎಂಬ ಬಗ್ಗೆ ಖಾತ್ರಿಪಡಿಸಿಕೊಂಡು ನೀರನ್ನು ಸರಬರಾಜು ಮಾಡಲು, ನೀರಿನ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲು ಜಿಲ್ಲಾಧಿಕಾರಿಗಳು ನಗರಸಭೆ ಆಯುಕ್ತರಿಗೆ ಲಿಖಿತ ಪತ್ರ ಬರೆದು ಸೂಚಿಸಿದ್ದಾರೆ.

ಈ ಮೇಲ್ಕಾಣಿಸಿದ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಕ್ತ ನಿರ್ದೇಶನಗಳನ್ನು ನೀಡಲು ಸೂಚಿಸಲಾಗಿದೆ. ತಪ್ಪಿದಲ್ಲಿ ವಿಪತ್ತು ನಿರ್ವಹಣಾ ಕಾಯಿದೆ–2005 ರನ್ವಯ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರ ಪ್ರದತ್ತವಾದ ಅಧಿಕಾರ ಚಲಾಯಿಸಿ ಸೆಕ್ಷನ್ 56ರ ಅಡಿಯಲ್ಲಿ ಸೂಕ್ತ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

# ಹೋಟೆಲ್‌ಗಳಲ್ಲಿ ಸ್ವಚ್ಛತೆ ಬಿಸಿನೀರು ಕಡ್ಡಾಯ

ಮೊದಲ ಪುಟದಿಂದ

ಸ್ವಚ್ಚವಾಗಿರಿಸಬೇಕು. ಯಾವುದೇ ನೊಣ, ಸೊಳ್ಳೆ, ಕೀಟಾಣುಗಳು ಆಹಾರದ ಮೇಲೆ ಕೂರದಂತೆ ಸ್ವಚ್ಚತೆಯನ್ನು ನಿರ್ವಹಿಸಬೇಕು. ಆಹಾರ ಸುರಕ್ಷತಾ ನಿಯಮಗಳನ್ನು ಕಡ್ಡಾಯ ಪಾಲಿಸಬೇಕು.

ಈ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಎಲ್ಲಾ ಹೊಟೇಲಗಳ ಮಾಲೀಕರು ಕಡ್ಡಾಯ ಪಾಲಿಸುವಂತೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ. ತಪ್ಪಿದಲ್ಲಿ ವಿಪತ್ತು ನಿರ್ವಹಣಾ ಕಾಯಿದೆ 2005ರನ್ವಯ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರ ಪ್ರದತ್ತವಾದ ಅಧಿಕಾರ ಚಲಾಯಿಸಿ ಸೆಕ್ಷನ್ 51 (ಬಿ)ರ ಅಡಿಯಲ್ಲಿ ಸೂಕ್ತ ಕ್ರಮ ವಹಿಸಲಾಗುವುದು ಎಂದು ವಿಜಯನಗರ ಜಿಲ್ಲೆಯ ಹೊಸಪೇಟೆಯ ಹೊಟೇಲ್ ಅಸೋಸಿಯೇಷನ್‌ಗೆ ಪತ್ರ ಬರೆದು ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

# ಗೃಹರಕ್ಷಕರ ರಾಜ್ಯಮಟ್ಟದ ಕ್ರೀಡಾಕೂಟ ಬಳ್ಳಾರಿಗೆ ಚಾಂಪಿಯನ್‌ಶಿಪ್ ಕಪ್



■ **ಹಂಪಿ ಟೈಮ್ಸ್ ಬಳ್ಳಾರಿ**

ಜ.02 ರಿಂದ 08 ರ ವರೆಗೆ ಬೆಂಗಳೂರಿನಲ್ಲಿ ನಡೆದ 2023–24ನೇ ಸಾಲಿನ ಗೃಹರಕ್ಷಕರ ರಾಜ್ಯಮಟ್ಟದ ವೃತ್ತಿಪರ ಹಾಗೂ ಕ್ರೀಡಾಕೂಟಗಳಲ್ಲಿ ಬಳ್ಳಾರಿ ಜಿಲ್ಲೆಯ ಗೃಹರಕ್ಷಕರ ಕ್ರೀಡಾಪಟುಗಳಿಗೆ ಚಾಂಪಿಯನ್‌ಶಿಪ್ ಕಪ್ ಲಭಿಸಿದೆ ಎಂದು ಜಿಲ್ಲಾ ಸಮಾದೇಷ್ಟರಾದ ಬಸವರಾಜ ಅಗಸರ ಅವರು ತಿಳಿಸಿದ್ದಾರೆ.

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಮುಂಡ್ಕೂರ್ ತರಬೇತಿ ಅಕಾಡೆಮಿ ಮೈದಾನದಲ್ಲಿ ಜ.08 ರಂದು ನಡೆದ ಗೃಹರಕ್ಷಕರ ರಾಜ್ಯಮಟ್ಟದ ವೃತ್ತಿಪರ ಹಾಗೂ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಗೃಹ ಸಚಿವರಾದ ಪರಮೇಶ್ವರ ಅವರು ಮತ್ತು ಪೊಲೀಸ್ ಮಹಾನಿರೀಕ್ಷಕರಾದ ಅಲೋಕ್ ಮೋಹನ್ ಅವರು ಕಪ್ ವಿತರಣೆ ಮಾಡಿದ್ದಾರೆ.

2023–24ನೇ ಸಾಲಿನ ಗೃಹರಕ್ಷಕರ ವೃತ್ತಿಪರ ಹಾಗೂ ಕ್ರೀಡಾಕೂಟಗಳಲ್ಲಿ ಈಶಾನ್ಯ ವಲಯದ 65 ಜನ ಗೃಹರಕ್ಷಕರು ಭಾಗವಹಿಸಿದ್ದರು. ಕ್ರೀಡೆಗಳಾದ 100 ಮೀ ಓಟ, 400 ಮೀ ಓಟ, 800 ಮೀ ಓಟ, ಉದ್ದ ಜಿಗಿತ, ಎತ್ತರ ಜಿಗಿತ ಮತ್ತು ವೃತ್ತಿಪರ ಕ್ರೀಡೆಗಳಾದ ಪ್ರಥಮ ಚಿಕಿತ್ಸೆ, ಅಗ್ನಿ ಶಮನ, ರೈಫಲ್ ಡ್ರಿಲ್, ರಕ್ಷಣೆ ಮತ್ತು ರೈಫಲ್ ಸಹಿತ ಶೂಟಿಂಗ್ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಬಳ್ಳಾರಿ ತಂಡವು ಪುರುಷರ ವಿಭಾಗದಲ್ಲಿ ಈಶಾನ್ಯ ವಲಯದ ವೃತ್ತಿಪರ ಕ್ರೀಡೆಗಳಾದ ರೈಫಲ್ ಡ್ರಿಲ್, ರಕ್ಷಣೆ ಮತ್ತು ಅಗ್ನಿ ಶಮನ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಮತ್ತು ಮಹಿಳಾ ವಿಭಾಗದಲ್ಲಿ ಪ್ರಥಮ ಚಿಕಿತ್ಸೆಯಲ್ಲಿ ಪ್ರಥಮ ಸ್ಥಾನ ಮತ್ತು ರೈಫಲ್ ಡ್ರಿಲ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ವೃತ್ತಿಪರ ಕ್ರೀಡೆ ಮತ್ತು ಎಲ್ಲಾ ತರಹದ ಕ್ರೀಡೆಗಳಲ್ಲಿ ಈಶಾನ್ಯ ವಲಯ ಮಟ್ಟದ ಬಳ್ಳಾರಿ ಜಿಲ್ಲೆಯ ಕ್ರೀಡಾಪಟುಗಳು "ಚಾಂಪಿಯನ್‌ಶಿಪ್ ಕಪ್" ಪಡೆದಿದ್ದಾರೆ.

ಈ ಸಂದರ್ಭದಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಸಮಾದೇಷ್ಟರಾದ ಬಸವರಾಜ ಅಗಸರ, ಬಳ್ಳಾರಿ ಜಿಲ್ಲೆಯ ಬೋಧಕರಾದ ಬಸವರಾಜ ಹಗಳಗಾರ, ವಿಜಯನಗರ ಜಿಲ್ಲೆಯ ಬೋಧಕರಾದ ಪ್ರಶಾಂತ್ ಪಾಟಿಲ್, ಸೀನಿಯರ್ ಪ್ಲಟೂನ್ ಕಮಾಂಡರ್ ಬಿ.ಕೆ.ಬಸವಲಿಂಗ, ಪ್ಲಟೂನ್ ಕಮಾಂಡರ್ ಹೆಚ್.ಲಕ್ಷ್ಮೀ ನಾರಾಯಣ, ಬಳ್ಳಾರಿ ಘಟಕದ ಕಂಪನಿ ಕಮಾಂಡರ್ ಜೆ.ಸುರೇಶ್, ಹೊಸಪೇಟೆ ಘಟಕದ ಘಟಕಾಧಿಕಾರಿ ಎಸ್.ಎಂ.ಗಿರೀಶ್ ಮತ್ತು ಎಲ್ಲಾ ಅಧಿಕಾರಿ ವರ್ಗದವರು, ಗೃಹರಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.

**14 ಭಾಷೆಗಳಲ್ಲಿ ಸುದ್ದಿ**
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ e-paper
REACH EVERY WHERE NO BORDER




ಮೈಕ್ರೋ ನ್ಯೂಸ್

## ಕೆ.ಎಂ.ರವಿಕುಮಾರ್ ಅಧ್ಯಕ್ಷರಾಗಿ ಬಿ.ಆರ್.ಮಂಜುಳಾ ಉಪಾಧ್ಯಕ್ಷರಾಗಿ ಆಯ್ಕೆ

**ಹಂಪಿ ಟೈಮ್ಸ್, ಹಗರಿಬೊಮ್ಮನಹಳ್ಳಿ:**
ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಮತ್ತು ವಿಎಸ್‌ಎಸ್‌ಎನ್ ಕಾರ್ಯದರ್ಶಿಗಳ ಸಂಘದ ನೂತನ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಿತು.
ಪಟ್ಟಣದಲ್ಲಿ ನಡೆದ ಸಭೆಯಲ್ಲಿ ವಿಜಯನಗರ ಜಿಲ್ಲಾಧ್ಯಕ್ಷ ಮಂಜುನಾಥರವರ ನೇತೃತ್ವದಲ್ಲಿ ನಡೆದ ಆಯ್ಕೆ ಪ್ರಕ್ರೀಯೆಯಲ್ಲಿ ಹೆಗ್ಡಾಳ್ ರಾಮಣ್ಣ (ಗೌರವ ಅಧ್ಯಕ್ಷ), ಕೆ.ಎಂ. ರವಿಕುಮಾರ್ (ಅಧ್ಯಕ್ಷ), ಬಿ.ಆರ್.ಮಂಜುಳಾ (ಉಪಾಧ್ಯಕ್ಷರು), ಎ.ಕೊಟ್ರಪ್ಪ (ಖಜಾಂಚಿ), ಶಶಿಧರ(ಕಾರ್ಯದರ್ಶಿ), ಉಮಪತಿ, ಜಿ. ಮಂಜುನಾಥ, ಜೆ.ಎಂ.ಕೊಟ್ರಯ್ಯ, ಎನ್.ಬಿ.ಕೊಟ್ರೇಶ, ಯಂಕಪ್ಪ, ಎಚ್.ನಾಗರಾಜ್, ಅಶೋಕ ಸುಣಗಾರ್, ಗುರುರಾಜ್, ಕೆ.ಎಂ.ತ್ರಿವೇಣಿ, ಕೆ.ಎಂ.ಕಾಳಮ್ಮ, ಜಿ.ಎಂ.ರಮೇಶ್, ರೆಡ್ಡಿನಾಯ್ಕರವರನ್ನು ನಿರ್ದೇಶಕರನ್ನಾಗಿ ಆಯ್ಕೆಮಾಡಲಾಯಿತು, ಉಳಿದಂತವರು ಸದಸ್ಯರಾಗಿ ಪಾಲ್ಗೊಂಡಿದ್ದರು ಎಂದು ಜಿಲ್ಲಾಧ್ಯಕ್ಷ ಮಂಜುನಾಥ ತಿಳಿಸಿದರು.

## ಗೃಹರಕ್ಷಕದಳದ ಗೌರವ ಸಮಾದೇಷ್ಟರ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ:**
ಜಿಲ್ಲೆಯ ಗೃಹ ರಕ್ಷಕದಳದ "ಗೌರವ ಸಮಾದೇಷ್ಟರ" ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಆರಕ್ಷಕ ಮಹಾ ನಿರ್ದೇಶಕರು, ಗೃಹರಕ್ಷಕದಳದ ಮಹಾ ಸಮಾದೇಷ್ಟರು ಮತ್ತು ಪೌರರಕ್ಷಣೆಯ ನಿರ್ದೇಶಕರಾದ ಅಕ್ಷಯ್ ಎಂ.ಹಾಕೆ ಅವರು ತಿಳಿಸಿದ್ದಾರೆ.
ಜಿಲ್ಲೆಯಲ್ಲಿ ಗೃಹರಕ್ಷಕದಳದ "ಗೌರವ ಸಮಾದೇಷ್ಟರ" ಖಾಲಿ ಇದ್ದು, ಅಭ್ಯರ್ಥಿಯನ್ನು ಅರ್ಹತೆ ಆಧಾರದ ಮೇಲೆ ಹಾಗೂ ಸರ್ಕಾರದ ನಿಯಮಾನುಸಾರವಾಗಿ ಆಯ್ಕೆ ಮಾಡಲಾಗುತ್ತದೆ.
*ಅರ್ಹತೆಗಳು:*
ವಯೋಮಿತಿ 50 ವರ್ಷ ಒಳಗಿರಬೇಕು, ಪದವಿ ಪೂರ್ಣಗೊಳಿಸಿರಬೇಕು, ಯಾವುದೇ ರಾಜಕೀಯ ಪಕ್ಷಗಳ ಚಟುವಟಿಕೆಗಳಲ್ಲಿ ಪಾಲ್ಗೊಂಡಿರಬಾರದು, ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಪ್ರಕರಣಗಳಲ್ಲಿ ಭಾಗಿಯಾಗಿರಬಾರದು, ಜಿಲ್ಲಾ ಮುಖ್ಯ ಕಚೇರಿಯ 20 ಕಿ.ಮೀ. ವ್ಯಾಪ್ತಿಯೊಳಗೆ ವಾಸವಿರಬೇಕು.
ಜಿಲ್ಲಾ ಆರೋಗ್ಯಾಧಿಕಾರಿಗಳಿಂದ ದೈಹಿಕ ಮತ್ತು ಮಾನಸಿಕ ಸಧೃಡತೆ ಪ್ರಮಾಣ ಪತ್ರ ಪಡೆದಿರಬೇಕು. ಮತ್ತು ರೆಸಿಪಿಯೆಂಟ್ ಆಫ್ ಗ್ಯಾಲಂಟ್ರಿ ಪ್ರಶಸ್ತಿ, ಎನ್.ಸಿ.ಸಿ "ಸಿ" ಪ್ರಮಾಣ ಪತ್ರ, ಭಾರತೀಯ ಸೇನೆ, ಪ್ಯಾರ ಮಿಲ್ಟ್ರಿ ಸೇನೆ ಅಥವಾ ಪೋಲಿಸ್ ಇಲಾಖೆಗಳಲ್ಲಿ ಐದು ವರ್ಷ ಸೇವೆ ಸಲ್ಲಿಸಿದವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಸ್ವವಿವರದೊಂದಿಗೆ ಜ.30 ರ ಒಳಗಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಜನರಿಗೆ ಆರೋಗ್ಯ ಸೇವೆ ದೊರಯಲಿ

## ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವಪ್ರಭು ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**
ಜನರಿಗೆ ಆರೋಗ್ಯ ಸೇವೆಗಳನ್ನು ತಲುಪಿಸಲು ಆರೋಗ್ಯ ಇಲಾಖೆಯು ಶ್ರಮಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವಪ್ರಭು ಬಿ. ಹೇಳಿದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮಂಗಳವಾರ ನಗರದ 60 ಹಾಸಿಗೆ ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಂಡಿದ್ದ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಬಗ್ಗೆ ಜಾಗೃತಿ ಕಾರ್ಯಕ್ರಮ ಹಾಗೂ ಕಿರುಚಿತ್ರ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಸೇವೆಗಳನ್ನು ಸಮರ್ಪಕವಾಗಿ ತಲುಪಿಸಬೇಕು. ಸರ್ಕಾರದ ಯೋಜನೆಗಳು ಕಟ್ಟಕಡೆಯ ಜನರಿಗೂಸಿಗುವಂತಾಗಬೇಕು. ಈ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ ಎಲ್. ಆರ್.ಶಂಕರ್ ನಾಯ್ಕಅವರು ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳು ದೊರೆಯದಿರುವಂತಹ ಗ್ರಾಮಗಳನ್ನು ಗುರುತಿಸಿ, ಅಲ್ಲಿಯ ಜನರ ಆರೋಗ್ಯ ಮಟ್ಟವನ್ನು ಸುಧಾರಿಸಲು ಆರೋಗ್ಯ ಮತ್ತು ಸೇವಾ ಕೇಂದ್ರಗಳನ್ನು ಸ್ಥಾಪನೆ ಮಾಡಿದೆ. ಈ ಕೇಂದ್ರಗಳಲ್ಲಿ ತಾಯಿ ಆರೋಗ್ಯ, ಗರ್ಭಿಣಿ ಹಾಗೂ ಬಾಣಂತಿ ಸೇವೆಗಳು, ನವಜಾತಾ ಶಿಶುಗಳ ಆರೈಕೆ ಸೇವೆಗಳು, ಮಕ್ಕಳು ಮತ್ತು ಹದಿಹರೆಯದವರ ಆರೋಗ್ಯ ಸೇವೆಗಳು, ಕುಟುಂಬ ಕಲ್ಯಾಣಯೋಜನೆ ಸೇರಿದಂತೆ ಒಟ್ಟು 12 ಸೇವೆಗಳನ್ನು ಜನರಿಗೆ ಉಚಿತವಾಗಿ ನೀಡಲಾಗುತ್ತಿದೆ. ಜಿಲ್ಲೆಯ ವಿವಿಧ ತಾಲೂಕುಗಳ ಒಟ್ಟು 13 ಗ್ರಾಮಗಳಲ್ಲಿ ಕಿರುಚಿತ್ರ ಪ್ರದರ್ಶನವನ್ನು ಹಮ್ಮಿಕೊಂಡು ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖನಾಯ್ಕ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ ದೊಡ್ಡಮನಿ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಭಾಸ್ಕರ್ ಸೇರಿದಂತೆ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಹಂಪಿ ಪ್ರವಾಸಿ ಮಾರ್ಗದರ್ಶಿಗಳಿಗೆ ದರ ನಿಗದಿ

**ಹಂಪಿ ಟೈಮ್ಸ್ ಹೊಸಪೇಟೆ**
ಪ್ರವಾಸೋದ್ಯಮ ಇಲಾಖೆಯಿಂದ ತರಬೇತಿ ಪಡೆದು ಹಂಪಿಯ ವಿವಿಧ ಸ್ಮಾರಕಗಳ ಬಳಿ ಪ್ರವಾಸಿಗರಿಗೆ ಮಾರ್ಗದರ್ಶನ ಮಾಡುತ್ತಿರುವ ಪ್ರವಾಸಿ ಮಾರ್ಗದರ್ಶಿಗಳಿಗೆ ದರ ನಿಗದಿ ಪಡಿಸಲಾಗಿದೆಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಎಂ. ಎಸ್. ದಿವಾಕರ ತಿಳಿಸಿದ್ದಾರೆ.





ವಿಜಯನಗರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಒಟ್ಟು 179 ಜನ ಪ್ರವಾಸಿ ಮಾರ್ಗದರ್ಶಿಗಳು ತರಬೇತಿಯನ್ನು ಪಡೆದಿರುತ್ತಾರೆ. ಪ್ರಸ್ತುತ ಪ್ರವಾಸಿ ಮಾರ್ಗದರ್ಶಿಗಳು ವಿಭಿನ್ನರೀತಿಯಲ್ಲಿ ಪ್ರವಾಸಿಗರಿಂದ ದರವನ್ನು ಪಡೆಯುತ್ತಿದ್ದು, ಏಕರೂಪತೆ ಇರುವುದಿಲ್ಲ. ಕೆಲವು ಪ್ರವಾಸಿ ಮಾರ್ಗದರ್ಶಿಗಳು ಪ್ರವಾಸಿಗರಿಂದ ಹೆಚ್ಚಿನ ಮೊತ್ತವನ್ನು ಪಡೆಯುತ್ತಿರುವ ಬಗ್ಗೆ, ದೂರುಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಪ್ರವಾಸಿಗರಿಗೆ ಹಾಗೂ ಪ್ರವಾಸಿ ಮಾರ್ಗದರ್ಶಿಗಳಿಗೆ ಇಬ್ಬರಿಗೂ ಹೊರೆಯಾಗದ ರೀತಿಯಲ್ಲಿ ಏಕರೂಪದ ದರ ನಿಗದಿಪಡಿಸಿದ್ದಲ್ಲಿ ಪ್ರವಾಸಿಗರಿಗೆ ಅನುಕೂಲವಾಗುವುದು ಎಂಬ ನಿಟ್ಟಿನಲ್ಲಿ, ಪ್ರವಾಸಿಗರಿಗೂ ಹಾಗೂ ಪ್ರವಾಸಿ ಮಾರ್ಗದರ್ಶಿಗಳಿಗೂ ಸಹಕಾರಿಯಾಗುವಂತೆ ದರಪಟ್ಟಿಯನ್ನು ನಿಗದಿಪಡಿಸಲು ಡಿಸೆಂಬರ್ 21ರಂದು ನಡೆದ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

**ದೇವಸ್ಥಾನ/ಸ್ಮಾರಕಗಳ ವಿವರ:**
ಶ್ರೀ ಪಂಪಾ ವಿರೂಪಾಕ್ಷದೇವಸ್ಥಾನದಆವರಣ, ಕಮಲ ಮಹಲ್ ಮತ್ತು ಗಜಶಾಲೆ ಆವರಣ, ರಾಜ ಪ್ರಾಂಗಣಆವರಣ, ಶ್ರೀ ವಿಜಯ ವಿಠಲ ದೇವಸ್ಥಾನ ಆವರಣ, ಶ್ರೀ ವಿಜಯ ವಿಠಲ ದೇವಸ್ಥಾನ ಆವರಣ, ಈ ಎಲ್ಲಾ ಸ್ಥಳಗಳಿಗೆ ತಲಾ 400 ರೂ.ಗಳು, ಸರ್ಕಾರಿ ಶಾಲಾ ಮಕ್ಕಳಿಗೆ ವಿಶೇಷರಿಯಾಯಿತಿ ಗೈಡ್ ಸೇವೆ (1 ರಿಂದ 10ನೇ ತರಗತಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳಿಗೆ ಅನ್ವಯ) ಪ್ರತಿ ಬಸ್‌ಗೆ 1400 ರೂ., ರೂ., ಒಂದು ದಿನದಗೈಡ್ ಸೇವೆಗೆ 1 ರಿಂದ 5 ಸದಸ್ಯರಿಗೆ 2500 ರೂ., 6 ರಿಂದ 14 ಸದಸ್ಯರಿಗೆ 2650 ರೂ., 15 ರಿಂದ 40 ಸದಸ್ಯರಿಗೆ 3500 ರೂ., ಭಾಷೆ ವಿಶೇಷ ಭತ್ಯೆಯಲ್ಲಿ 1 ರಿಂದ 14 ಸದಸ್ಯರಿಗೆ 700 ರೂ. ಹಾಗೂ 15 ರಿಂದ 40 ಸದಸ್ಯರಿಗೆ 900 ರೂ. ನಿಗದಿಪಡಿಸಲಾಗಿದೆ. ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ವತಿಯಿಂದ ಈ ದರವನ್ನು ನಿಗದಿಪಡಿಸಿದ ಮೊತ್ತಕ್ಕಿಂತ ಹೆಚ್ಚಾಗಿ ಪ್ರವಾಸಿಗರಿಂದ ದರವನ್ನು ಪಡೆಯದಂತೆ ಕಟ್ಟುನಿಟ್ಟಾಗಿ ಈ ಮೂಲಕ ಆದೇಶಿಸಿದೆ. ಮುಖ್ಯವಾಗಿ ಶಾಲಾ ಮಕ್ಕಳು ಹಂಪಿಗೆ ಭೇಟಿ ನೀಡಿದಾಗ ಅತ್ಯಂತ ಕಡಿಮೆದರದಲ್ಲಿ ಮಾರ್ಗದರ್ಶನ ಸೇವೆಯನ್ನು ಒದಗಿಸಬೇಕು. ಈ ಆದೇಶವನ್ನು ಉಲ್ಲಂಘಿಸುವ ಪ್ರವಾಸಿ ಮಾರ್ಗದರ್ಶಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

# ಭಾಷಾ ಕಲಿಕೆಯಿಂದ ಜ್ಞಾನಾಭಿವೃದ್ಧಿ

## ನ್ಯಾಯವಾದಿ ಎಂ.ಎಂ.ಜೆ. ಶರತ್ ಚಂದ್ರ ಅಭಿಮತ | ದತ್ತಿ ಉಪನ್ಯಾಸ ಹಾಗೂ ಕವಿಗೋಷ್ಠಿ



**ಹಂಪಿ ಟೈಮ್ಸ್ ಕೊಟ್ಟೂರು**
ಪಾಲಕರು ಆಂಗ್ಲಮಾಧ್ಯಮಕ್ಕೆ ಮಾರುಹೋಗದೇ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿದಾಗ ಕನ್ನಡ ಭಾಷಾಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ನ್ಯಾಯವಾದಿ ಎಂ.ಎಂ.ಜೆ. ಶರತ್ ಚಂದ್ರ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಕಸಾಪ ತಾಲ್ಲೂಕು ಘಟಕದ ವತಿಯಿಂದ ಶ್ರೀಕೋಲಶಾಂತೇಶ್ವರ ಪ್ರೌಢಶಾಲೆಯಲ್ಲಿ ಸೋಮವಾರ ಏರ್ಪಡಿಸಿದ್ದ ದತ್ತಿ ಉಪನ್ಯಾಸ ಹಾಗೂ ಕವಿಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ವ್ಯವಹಾರ ದೃಷ್ಟಿಯಿಂದ ಹಲವು ಭಾಷೆಗಳನ್ನು ಕಲಿತರು ನಮ್ಮ ಮಾತೃಭಾಷೆಯನ್ನು ಮರೆಯದೆ ಬಳಸಬೇಕು ಬೆಳಸಬೇಕು ಎಂದರು.

ಮಾತೃಭಾಷೆ ಹಾಗೂ ಪ್ರಚಲಿತ ಶೈಕ್ಷಣಿಕ ಸಮಸ್ಯೆಗಳು' ವಿಷಯದ ಬಗ್ಗೆ ಉಪನ್ಯಾಸ ನೀಡಿದ ಪತ್ರಕರ್ತ ಎಸ್.ಎಂ.ಗುರುಪ್ರಸಾದ್ ಮಾತನಾಡಿ ಮಹಾತ್ಮ ಗಾಂಧೀಜಿಯವರು ಮೂಲ ಭಾಷೆಯಲ್ಲಿಯೇ ಮಕ್ಕಳಿಗೆ ಶಿಕ್ಷಣ ಸಿಗುವಂತಾಗಬೇಕೆಂಬುದು ಅವರ ಕನಸಾಗಿತ್ತು ಎಂದರು.

ಶಿಕ್ಷಕರನ್ನು ಇತರೆ ಚಟುವಟಿಕೆಗಳಿಗೆ ನಿಯೋಜಿಸದೆ ಭೋದನೆಗೆ ಮಾತ್ರ ಸೀಮಿತಗೊಳಿಸಿದಾಗ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ದೊರೆಯಲು ಸಾಧ್ಯವಾಗುತ್ತದೆ. ಮಕ್ಕಳಿಗೆ ಪುಸ್ತಕಗಳ ಹೊರೆ ಕಡಿಮೆ ಮಾಡಿದಾಗ ಕಲಿಕೆಗೆ ಸಹಕಾರಿಯಾಗುತ್ತದೆ ಎಂದರು.

ವ್ಯವಹಾರ ಜ್ಞಾನಕ್ಕೆ ಬೇಕಾದ ಹಾಗೂ ಸ್ಥಳೀಯ ಅಂಶಗಳಿಗೆ ಆದ್ಯತೆ ನೀಡಿ ಪಠ್ಯದಲ್ಲಿ ಅಳವಡಿಸಿದಾಗ ನೋಡಿ ಕಲಿ, ಮಾಡಿ ತಿಳಿ ಎಂಬಂತೆ ಮಕ್ಕಳು ಕಲಿಕೆಯೊಂದಿಗೆ ಸರ್ವಾಂಗೀಣ ಅಭಿವೃದ್ಧಿಗೊಳ್ಳಲು ಸಾಧ್ಯವಾಗುತ್ತದೆ ಎಂದರು.

ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಗ್ರಂಥಪಾಲಕ ಎಸ್.ಡಿ.ಈರಗಾರ,ಮುಖ್ಯ ಶಿಕ್ಷಕ ಎ.ಎಸ್.ವೀರೇಶ್ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಐ.ಎಂ.ದಾರುಕೇಶ್, ಜೆಸಿಐ ಕೊಟ್ಟೂರು ಕಾಟನ್ ಮಾಜಿ ಅಧ್ಯಕ್ಷ ಅಂಗಡಿ ಪಂಪಾಪತಿ ಇವರನ್ನು ಸನ್ಮಾನಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ತಾಲ್ಲೂಕು ಘಟಕಾಧ್ಯಕ್ಷ ದೇವರಮನಿ ಕೊಟ್ರೇಶ್ ವಹಿಸಿದ್ದರು. ಕವಿಗಳು ಹಾಗೂ ಕವಯಿತ್ರಿಯರು ತಮ್ಮ ಕವನಗಳನ್ನು ವಾಚಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಘಟಕದ ಪದಾಧಿಕಾರಿಗಳಾದ ಅರವಿಂದ ಬಸಾಪುರ, ಎಸ್.ರಾಜಣ್ಣ, ಈಶ್ವರಪ್ಪ ತುರಕಾಣಿ, ಹೊನ್ನಮ್ಮ ತುರಕಾಣಿ, ಕೆ.ಶಶಿಕಲಾ, ಪದ್ಮ ಜಾಗಟಗೆರೆ, ರಾಜೇಂದ್ರಗೌಡ ಹಾಗೂ ಶಾಲಾ ಸಿಬ್ಬಂದಿ ಪಾಲ್ಗೊಂಡಿದ್ದರು.

# ಹಂಪಿ ಉತ್ಸವ: ಪ್ರದರ್ಶನ ಮಳಿಗೆ ಕಾಯ್ದಿರಿಸಲು ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2023-24ನೇ ಸಾಲಿನ ಹಂಪಿ ಉತ್ಸವಕಾರ್ಯಕ್ರಮವು ಫೆಬ್ರವರಿ2 ರಿಂದ 4 ರವರಿಗೆ ಆಯೋಜಿಸಲಾಗಿದ್ದು, ಹಂಪಿ ಉತ್ಸವದಲ್ಲಿ 10/10 ಅಡಿ ಅಳತೆಯ ಮಳಿಗೆಗಳನ್ನು ವಸ್ತು ಪ್ರದರ್ಶನಕ್ಕಾಗಿ ಮುಂಗಡವಾಗಿ ಕಾಯ್ದಿರಿಸಲು ಅರ್ಜಿ ಆಹ್ವಾನಿಸಲಾಗಿದೆ. ಮಳಿಗೆಗಳನ್ನು ಕಾಯ್ದಿರಿಸುವವರು ಅರ್ಜಿಯೊಂದಿಗೆ ಅಧ್ಯಕ್ಷರು, ಹಂಪಿ ಉತ್ಸವ, ವಿಜಯನಗರ ಇವರ ಹೆಸರಿನಲ್ಲಿ ರೂ.3000ಮೊತ್ತದ ಡಿ.ಡಿ.ಯನ್ನು ಜನವರಿ 18ರ ಸಂಜೆ 5.30 ರೊಳಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಸೆಂಟರ್ ಆಫ್‌ಎಕ್ಸಲೆನ್ಸ್, ನ್ಯಾಷನಲ್ ಕಾಲೇಜ್ ಹಿಂಭಾಗ, ಎನ್.ಸಿ.ಕಾಲೋನಿ, ಹರಿಹರ ರಸ್ತೆ, ಹೊಸಪೇಟೆ-583203,ಇಲ್ಲಿಗೆ ಸಂಪರ್ಕಿಸಬಹುದಾಗಿದೆ.
ಹೆಚ್ಚಿನ ಮಾಹಿತಿಗಾಗಿ ಕೃಷಿ ಇಲಾಖೆಯಅನಿಲ್‌ಕುಮಾರ್‌ಮೊಬೈಲ್ ಸಂಖ್ಯೆ: 9449135765 ಗೆ ಸಂಪರ್ಕಿಸಹುದುಎಂದು ಹಂಪಿ ಉತ್ಸವವಸ್ತು ಪ್ರದರ್ಶನ ಉಪ ಸಮಿತಿ ಅಧ್ಯಕ್ಷರು ಹಾಗೂ ಜಂಟಿ ಕೃಷಿ ನಿರ್ದೇಶಕರಾದ ಶರಣಪ್ಪ ಮುದಗಲ್ ಅವರು ತಿಳಿಸಿದ್ದಾರೆ.

# ಹಾಸಿಗೆ ಹಿಡಿದ ವಯೋವೃದ್ದರನ್ನು ಮನೆ ಭೇಟಿಯೊಂದಿಗೆ ಆರೈಕೆ

**ಹಂಪಿ ಟೈಮ್ಸ್ ಬಳ್ಳಾರಿ**
ಹಾಸಿಗೆ ಹಿಡಿದ ವಯೋವೃದ್ಧರಿಗೆ ಸೂಕ್ತ ವೈದ್ಯಕೀಯ ಉಪಚಾರ ಕೈಗೊಳ್ಳುವ ಜವಾಬ್ದಾರಿಯನ್ನು ಪಾಲಕರಿಗೆ ತಿಳಿಸುತ್ತಾ, ಅಮೃತವಾಹಿನಿ ಸಂಚಾರಿ ಆರೋಗ್ಯ ಘಟಕದ ವೈದ್ಯಕೀಯ ತಂಡವು ಮನೆ ಭೇಟಿ ಮೂಲಕ ಉಪಚಾರ ಮಾಡಿ ಅಗತ್ಯ ಔಷಧಿಗಳನ್ನು ಸ್ಥಳದಲ್ಲಿಯೇ ಒದಗಿಸಿ ಮರು ಭೇಟಿಯೊಂದಿಗೆ ಸಾಂತ್ವನ, ಧೈರ್ಯ ಹೇಳುವ ಕಾರ್ಯ ಸಂಡೂರಿನ ವೈದ್ಯಕೀಯ ತಂಡದಿಂದ ನಡೆದಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಸಂಡೂರು ತಾಲ್ಲೂಕಿನ ಯಶವಂತನಗರ ಗ್ರಾಮದ ಮಾರೆಕ್ಕ ಎನ್ನುವ 70 ವರ್ಷದ ವಯೋವೃದ್ದರು ಕಳೆದ ಒಂದು ವಾರದ ಹಿಂದೆ ಇನ್ನೊಬ್ಬರ ಸಹಾಯದಿಂದ ನಡೆದಾಡುತ್ತಿದ್ದ ಇವರು, ಇದ್ದಕ್ಕಿದ್ದಂತೆ ಹಾಸಿಗೆ ಹಿಡಿದಿದ್ದು, ಹತ್ತಿರದ ಸಂಡೂರು ಆಸ್ಪತ್ರೆಗೆ ಹೋಗದೇ ಮನೆಯಲ್ಲಿ ಇರುವ ಕುರಿತು ಮಾಹಿತಿಯನ್ನು ಪ್ರತಿ ವಾರ ಯಶವಂತನಗರ ಗ್ರಾಮಕ್ಕೆ ಆಗಮಿಸುವ ಅಮೃತವಾಹಿನಿ ಸಂಚಾರಿ ಆರೋಗ್ಯ ಘಟಕದ ವೈದ್ಯಕೀಯ ತಂಡವು ಪಡೆಯಿತು.

ಡಾ.ವಿಜಯಲಕ್ಷ್ಮೀ ತಕ್ಷಣವೇ ಮಾಹಿತಿ ದೊರೆತ ಕೂಡಲೆ ಸಿಬ್ಬಂದಿಯವರಾದ ಜ್ಯೋತಿ, ಚೈತ್ರಾ, ರಾಧಾ ಅವರೊಂದಿಗೆ ಮನೆ ಭೇಟಿ ತಪಾಸಣೆ ಕೈಗೊಂಡು ಪರೀಕ್ಷಿಸಿ ಕೆಮ್ಮಿಗೆ ಸಂಬಂಧಿಸಿದ ಔಷಧಿ ನೀಡಿ ಕುಟುಂಬ ಸದಸ್ಯರಿಗೆ ಆರೈಕೆ ಕುರಿತು ಮಾಹಿತಿ ನೀಡಿದ್ದಾರೆ. ಮನೆ ಬಾಗಿಲಿಗೆ ಬಂದು ಔಷಧಿ ನೀಡಿದ ವೈದ್ಯರಿಗೆ ಕುಟುಂಬದ ಸದಸ್ಯರು ಧನ್ಯವಾದ ತಿಳಿಸಿದ್ದಾರೆ.

ಅಮೃತವಾಹಿನಿ: 2021 ಜನವರಿಯಲ್ಲಿ ಸಂಡೂರು ತಾಲೂಕಿನ 103 ಗ್ರಾಮಗಳಲ್ಲಿ ವೈದ್ಯಕೀಯ ಉಪಚಾರ, ಔಷಧಿ ಒದಗಿಸುವ ಉದ್ದೇಶದೊಂದಿಗೆ ತಾಲೂಕಿನಲ್ಲಿರುವ ನ್ಯಾಷನಲ್ ಮೈನಿಂಗ್ ಡೆವಲಪ್‌ಮೆಂಟ್ ಕಾರ್ಪೋರೇಷನ್ (ಎನ್‌ಎಮ್‌ಡಿಸಿ)ನ ಸಿಎಸ್‌ಆರ್ ಅನುದಾನಡಿಯಲ್ಲಿ ಅಂಬ್ಯುಲೆನ್ಸ್‌ಗಳನ್ನೊಳಗೊಂಡ ಅಮೃತವಾಹಿನಿ ಹೆಸರಿನೊಂದಿಗೆ ಒಟ್ಟು 10 ಸಂಚಾರಿ ಆರೋಗ್ಯ ಘಟಕಗಳಿಗೆ ಸಂಡೂರು ಶಾಸಕ ಈ.ತುಕಾರಾಂ ಅವರು ನೀಡಿದ್ದರು.

ಅಮೃತವಾಹಿನಿ ವೈದ್ಯಕೀಯ ತಂಡದಲ್ಲಿ ವೈದ್ಯರು, ಔಷಧಿ ವಿತರಕರು, ಪ್ರಯೋಗಾಲಯ ತಂತ್ರಜ್ಞರು, ಶುಶ್ರೂಷಕರು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹಾಗೂ ಚಾಲಕ ಸೇರಿದಂತೆ ಒಟ್ಟು ಆರು ಜನರ ತಂಡ ಕಾರ್ಯನಿರ್ವಹಿಸುತ್ತಿದೆ. ಅಂದಿನಿಂದ ನಿರಂತರವಾಗಿ ಸಂಡೂರು ತಾಲೂಕಿನಲ್ಲಿ ವೈದ್ಯಕೀಯ ಸೇವೆಗಳು ಪ್ರತಿದಿನ ಒಂದು ಘಟಕವು ಎರಡು ಗ್ರಾಮಗಳಲ್ಲಿ ಬೆಳಿಗ್ಗೆ ಮತ್ತು ಮಧ್ಯಾಹ್ನದಂದು ಕ್ರಿಯಾ ಯೋಜನೆಯಂತೆ ವೈದ್ಯಕೀಯ ಸೇವೆ ನೀಡಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೈ.ರಮೇಶ್‌ಬಾಬು ಅವರು ತಿಳಿಸಿದ್ದಾರೆ.







**INTHE COURT OF THE CIVIL JUDGE AND J.M.F.C. AT KUDLIGI**
**Crl. Misc. No.862/2021**

Between:
1. Suresh H.V Son of Eranna, aged about 36 years, Hindu, Agriculturist, residing at Hulikere village in Kudligi Taluk, Vijayanagra District.
... Petitioner And
The Tahasildar Kudligi ... Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased petitioner Father by name Eranna Son of late Doddahanumanthappa was died on 04/02/2020 Hulikere village in Kudligi Taluk, Vijayanagra District.. on the file of the civil Judge& JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 11/01/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 28/12/2021

By Order of the court
Chief Ministerial
Officer Civil Judge J.D) Court Kudligi

**Parameshwara.H**
Advocate, Kudligi

# AFFIDAVIT

I, **KAKUBAL KAKUBALAPPA** S/o Kakubal Lakshmana Setty, Aged 79 years, Hindu R/o House No.129/1, 22nd Ward, 2nd Cross, J.P.Nagar. VTC: Hospeet, Vijayanagara Dist.

My name is in Adhar Card as **KAKUBAL KAKUBALAPPA**, and in Bank account my name is as **K KAKUBALA SETTY** the above both names are same and belongs to me only. vide affidavit dated 03-01-2024 before Notary H.P.KALLAM BHAT at Hosapete-583201

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA